# ಅಖಿಲ ಭಾರತ ವೀರಶೈವ ಮಹಾಸಭಾ (ರಿ.)

ನಂ.17/4, 'ವೀರಶೈವ-ಲಿಂಗಾಯತ ಭವನ', ಸದಾಶಿವನಗರ, ಬೆಂಗಳೂರು-560 080

## 2017-18ನೇ ಸಾಲಿನ ವಾರ್ಷಿಕ ವರದಿ

**ಮಾನ್ಯರೆ,**

ಮಹಾಸಭೆಯ 2017-18ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನು ಸ್ವಾಗತಿಸಲು ಹರ್ಷಿಸುತ್ತೇವೆ. 2017-18ನೇ ಸಾಲಿನ **"ವಾರ್ಷಿಕ ವರದಿ"**ಯನ್ನು ತಮ್ಮ ಅವಗಾಹನೆಗೆ ಹಾಗೂ ಒಪ್ಪಿಗೆಗಾಗಿ ಕಾರ್ಯಕಾರಿ ಸಮಿತಿಯ ಪರವಾಗಿ ಮಂಡಿಸುತ್ತಿದ್ದೇವೆ.

1. **ಕಾರ್ಯಕಾರಿ ಸಮಿತಿ ಸಭೆಗಳು :-**

ವರದಿಯ ಅವಧಿಯಲ್ಲಿ ದಿನಾಂಕ: 11-05-2017, 02-08-2017(ಕಾರ್ಯಕಾರಿ ಸಮಿತಿ ಮತ್ತು ಜಿಲ್ಲಾಧ್ಯಕ್ಷರುಗಳ ತುರ್ತುಸಭೆ), 17-08-2017, 30-11-2017 ಮತ್ತು 23-03-2018ರಂದು **"ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣ", ಬೆಂಗಳೂರು** ಇಲ್ಲಿ ಒಟ್ಟು 5 ಕಾರ್ಯಕಾರಿ ಸಮಿತಿ ಸಭೆಗಳು ನಡೆದಿರುತ್ತವೆ. ಈ ಸಭೆಗಳಲ್ಲಿ ಒಟ್ಟು 10 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ನಿರ್ಣಯಗಳು ಈ ಕೆಳಗಿನಂತಿವೆ.

1. ಜಾತಿವಾರು ಜನಗಣತಿ ವರದಿಯು ಅವೈಜ್ಞಾನಿಕವು, ಕಾನೂನು ಬಾಹೀರವು, ಇದು ನಮ್ಮ ಸಮಾಜಕ್ಕೆ ಮಾರಕವೂ ಆಗಿದೆ. ಈ ವರದಿಯನ್ನು ಪ್ರಕಟವಾಗದಂತೆ ತಡೆಯಾಜ್ಞೆ ತರಲು ವಕೀಲರಾದ ಶ್ರೀ ಜಯಕುಮಾರ ಇವರ ಮುಂದಾಳತ್ವದಲ್ಲಿ ಕಾನೂನಿನ ಹೋರಾಟ ಮಾಡಲು ಹಾಗೂ ಅವರಿಗೆ ಮಹಾಸಭೆಯಿಂದ ಸಂಭಾವನೆ ನೀಡಲು ನಿರ್ಣಯಿಸಲಾಯಿತು.

2. ಸರ್ಕಾರದಿಂದ ನಮ್ಮ ಸಮಾಜಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಸಮಾಜದ ಶಕ್ತಿ ಪ್ರದರ್ಶಿಸಿ, ಸರ್ಕಾರದಿಂದ ಸಮಾಜ ಹಾಗೂ ಸಮುದಾಯದವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ರಾಜ್ಯದ 4 ವಿಭಾಗಗಳಲ್ಲಿ ಪ್ರತ್ಯೇಕ ಸಮಾವೇಶಗಳನ್ನು ಹಮ್ಮಿಕೊಂಡು ಮುಖ್ಯಮಂತ್ರಿ ಹಾಗೂ ಸರ್ಕಾರದ ಮೇಲೆ ಒತ್ತಡ ಹೇರಲು ನಿರ್ಣಯಿಸಲಾಯಿತು.

3. 2003ರಂತೆ ಗುರು-ವಿರಕ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮೂಲಕ **"ವೀರಶೈವ-ಲಿಂಗಾಯತ ಒಂದೇ"** ಎಂಬ ಭಾವನೆ ಮೂಡಿಸುವ ಕಾರ್ಯವನ್ನು ಮಾಡಲು ನಿರ್ಣಯಿಸಿ ದಿನಾಂಕ, ಸ್ಥಳ ಮತ್ತು ಸಮಯ ನಿಗದಿಪಡಿಸಲು ಮಾನ್ಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.

4. ಒಳಪಂಗಡಗಳ ಸಮನ್ವಯ ಸಭೆ ಕರೆಯಲು ಮಾನ್ಯ ಅಧ್ಯಕ್ಷರಿಗೆ ಸಂಪೂರ್ಣ ಅಧಿಕಾರ ನೀಡಲಾಯಿತು.

5. ವೀರಶೈವ-ಲಿಂಗಾಯತ ಧರ್ಮ ಹಿಂದು ಧರ್ಮದ ಭಾಗವಲ್ಲ. ಯಾರೆಲ್ಲ **ಷಟ್‌ಸ್ಥಳ, ಪಂಚಾಚಾರ, ಅಷ್ಟಾವರಣ** ಅನುಸರಿಸುವ **ವೀರಶೈವ-ಲಿಂಗಾಯತ ಎರಡೂ ಒಂದೇ**. ವೀರಶೈವ-ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಲು ಸರ್ವ ರೀತಿಯ ಪ್ರಯತ್ನ ಮಾಡಲು ನಿರ್ಣಯಿಸಲಾಯಿತು.

6. ವೀರಶೈವ–ಲಿಂಗಾಯತ ಬೇರೆ ಬೇರೆ ಹಾಗೂ ಒಂದೇ ಎಂದು ಎರಡೂ ವಾದಗಳನ್ನು ಮಾಡುತ್ತಿರುವ ಗುರು–ವಿರಕ್ತ ಮಠಾಧಿಪತಿಗಳ, ಸಮಾಜದ ಜನಪ್ರತಿನಿಧಿಗಳ, ಮುಖಂಡರುಗಳ ಹಾಗೂ ವಿಷಯ ತಜ್ಞರ ಸಭೆಯನ್ನು ಸದ್ಯದಲ್ಲಿಯೇ ಏರ್ಪಡಿಸಿ ಪ್ರಸ್ತುತ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಲು ನಿರ್ಣಯಿಸಲಾಯಿತು.

7. ಮಹಾಸಭೆಯ ನಿಯಮ, ನಿಬಂಧನೆಗಳನ್ನು ಒಪ್ಪಿ ಸದಸ್ಯರಾಗಿದ್ದ ಕೆಲವರು ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಮ್ಮತ ಮೂಡಿಸಲು ನಿರ್ಣಯಿಸಲಾಯಿತು.

8. ವೀರಶೈವ–ಲಿಂಗಾಯತ ಧರ್ಮದ ವಿಚಾರವಾಗಿ ಬಹಿರಂಗ ಹೇಳಿಕೆ ನೀಡಿ ಸಮಾಜದಲ್ಲಿ ಗೊಂದಲವನ್ನು ಮೂಡಿಸದೇ ಸಮಾಜದ ಘನತೆ, ಗೌರವಕ್ಕೆ ಧಕ್ಕೆ ಬಾರದಂತೆ ನಡೆದುಕೊಳ್ಳಲು ಹಾಗೂ ತಮ್ಮ ಅಭಿಪ್ರಾಯವನ್ನು ಮಹಾಸಭೆಗೆ ಮಂಡಿಸುವಂತೆ ಮನವಿ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

9. ಮಹಾಸಭೆಯ ಈ ನಿರ್ಣಯಗಳಿಗೆ ಹಲವು ಪೀಠಾ/ಮಠಾಧೀಶರುಗಳು, ಸಂಘ–ಸಂಸ್ಥೆಗಳು, ಉಪಪಂಗಡಗಳ ಮುಖಂಡರುಗಳು ಹಾಗೂ ಎಲ್ಲ ಪಕ್ಷಗಳ ಜನಪ್ರತಿನಿಧಿಗಳು ಬೆಂಬಲ ವ್ಯಕ್ತಪಡಿಸಿದ್ದಾರೆ. ಅವರುಗಳಿಗೆ ಸಭೆಯು ಕೃತಜ್ಞತೆಗಳನ್ನು ಸಲ್ಲಿಸಿ ನಿರ್ಣಯವನ್ನು ಅಂಗೀಕರಿಸಲಾಯಿತು.

10. 2016–17ನೇ ಸಾಲಿನ **ಪ್ರತಿಭಾ ಪುರಸ್ಕಾರ** ಸಮಾರಂಭದ ಜೊತೆಯಲ್ಲಿಯೇ ಮಹಾಸಭೆಯ ಸಂಸ್ಥಾಪಕರಾದ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವ**ವನ್ನು ಆಚರಿಸುವಂತೆ ಎಲ್ಲಾ ಜಿಲ್ಲಾ ಘಟಕಗಳಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು.

11. ಲಿಂಗಾಯತ ಧರ್ಮ ಮತ್ತು ವೀರಶೈವ–ಲಿಂಗಾಯತ ಧರ್ಮ ಎಂಬ ಹೋರಾಟಗಳನ್ನು ರೂಪಿಸುತ್ತಿರುವ ಎರಡು ಬಣಗಳಿಂದ ಅಂತರಗಳನ್ನು ಕಾಯ್ದುಕೊಳ್ಳಲು ಮಹಾಸಭಾ ಹಾಗೂ ಎಲ್ಲಾ ಘಟಕಗಳ ಪದಾಧಿಕಾರಿಗಳು ಸಭೆಗಳಲ್ಲಿ ಭಾಗವಹಿಸದಿರಲು ನಿರ್ಣಯಿಸಲಾಯಿತು.

12. ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಒನಕೆ ಓಬವ್ವ ಇವರುಗಳ ವ್ಯಕ್ತಿತ್ವಕ್ಕೆ ಧಕ್ಕೆಯಾಗುವಂತೆ ಹೇಳಿಕೆ ನೀಡುತ್ತಿದ್ದವರ ವಿರುದ್ಧ ಕ್ರಮಕೈಗೊಳ್ಳಲು ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಪತ್ರ ಬರೆದು ಒತ್ತಾಯಿಸಲು ಮತ್ತು ಖಂಡನಾ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.

13. ಒಳಪಂಗಡಗಳ ಮಧ್ಯೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಒಳಪಂಗಡಗಳಲ್ಲಿ ವಿವಾಹಗಳು ನೆರವೇರಿದರೆ ವಧು–ವರರನ್ನು ಪ್ರೋತ್ಸಾಹಿಸುವ ಸಲುವಾಗಿ ಮಹಾಸಭೆಯ **"ಗೌರವ ಸದಸ್ಯತ್ವ"**ವನ್ನು ನೀಡಲು ನಿರ್ಣಯಿಸಲಾಯಿತು.

14. ಮಹಾಸಭೆಯ 23ನೇ ಮಹಾಅಧಿವೇಶನವನ್ನು ಸಾರ್ವತ್ರಿಕ ಚುನಾವಣೆಯ ನಂತರ ದಾವಣಗೆರೆಯಲ್ಲಿ ನಡೆಸಲು ನಿರ್ಣಯಿಸಲಾಯಿತು.

15. ರಾಜ್ಯ ಸರ್ಕಾರವು ಅಲ್ಪಸಂಖ್ಯಾತರ ಕಾಯ್ದೆ 2ಡಿ ಅಡಿಯಲ್ಲಿ ನಮ್ಮ ಮನವಿಯನ್ನು ಪುರಸ್ಕರಿಸಿ **"ಲಿಂಗಾಯತ ಮತ್ತು ವೀರಶೈವ–ಲಿಂಗಾಯತ"**(ಬಸವತತ್ವವನ್ನು ಪಾಲಿಸುವವರು)ವನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಿ, 2(ಸಿ) ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸನ್ನೂ ಸಹ ಮಾಡಿದೆ. ಒತ್ತಾಯಪೂರ್ವಕವಾಗಿ ಯಾವುದೇ ತತ್ವವನ್ನು ಹೇರುವುದು (ಬಸವತತ್ವವನ್ನು ಪಾಲಿಸುವವರು) ಅಸಂವಿಧಾನಿಕವಾದುದು. ಆದ್ದರಿಂದ ಇದನ್ನು ತಕ್ಷಣವೇ ರಾಜ್ಯ ಸರ್ಕಾರವು ಹಿಂಪಡೆಯುವಂತೆ ಒತ್ತಾಯಿಸಲು ನಿರ್ಣಯಿಸಲಾಯಿತು.

16. ಮಹಾಸಭೆಯು 2013ರಲ್ಲಿ ಕೇಂದ್ರ ಸರ್ಕಾರಕ್ಕೆ **"ವೀರಶೈವ–ಲಿಂಗಾಯತ ಧರ್ಮಕ್ಕೆ" ಪ್ರತ್ಯೇಕ ಧರ್ಮದ ಮಾನ್ಯತೆ** ನೀಡುವಂತೆ ಸಲ್ಲಿಸಿದ್ದ ಮನವಿಯು ಇನ್ನೂ ಪರಿಶೀಲನೆಯ ಹಂತದಲ್ಲಿದ್ದು, ಆ ಮನವಿಯನ್ನು ಪುರಸ್ಕರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

17. ಈಗ ರಾಜ್ಯ ಸರ್ಕಾರವು ನಮ್ಮ ಸಮುದಾಯಕ್ಕೆ ಅಲ್ಪಸಂಖ್ಯಾತರ ಮಾನ್ಯತೆ ನೀಡಿರುವುದು ಮೇಲ್ನೋಟಕ್ಕೆ ಸೌಲಭ್ಯ ರಹಿತವಾಗಿರುವುದು ಕಂಡುಬರುತ್ತದೆ. ಅಲ್ಪಸಂಖ್ಯಾತರ ಸ್ಥಾನ–ಮಾನ ನೀಡುವುದಾದರೆ ನಮ್ಮ ಸಮುದಾಯಕ್ಕೂ ಸಹ ಅಲ್ಪಸಂಖ್ಯಾತ ವರ್ಗಗಳಿಗೆ ಸಿಗುವ ಸಕಲ ಸೌಲಭ್ಯಗಳನ್ನು (ಶೈಕ್ಷಣಿಕ, ಉದ್ಯೋಗ ಮತ್ತು ಎಲ್ಲಾ ಕ್ಷೇತ್ರಗಳಲ್ಲಿ) ನೀಡಲು ಮತ್ತು ಅನುದಾನವನ್ನು ನೀಡಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಲು ನಿರ್ಣಯಿಸಲಾಯಿತು.

18. 2013ರಲ್ಲಿ ಮಹಾಸಭೆಯು ಕೇಂದ್ರ ಸರ್ಕಾರಕ್ಕೆ **"ಪ್ರತ್ಯೇಕ ಧರ್ಮದ ಮಾನ್ಯತೆ"**ಗಾಗಿ ಸಲ್ಲಿಸಿದ್ದ ಮನವಿಯು ಇನ್ನೂ ಪರಿಶೀಲನೆಯ ಹಂತದಲ್ಲಿದೆ. ಆದರೆ ಮನವಿಯು ತಿರಸ್ಕರವಾಗಿದೆಯೆಂದು ರಾಜಕೀಯ ಪಕ್ಷಗಳ ಮುಖಂಡರು ಮತ್ತು ಸಂಘಟನೆಗಳು ಹಾಗೂ ಪೀಠ–ಮಠಾಧೀಶರುಗಳು ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿರುವುದನ್ನು ಸಭೆಯು ಒಕ್ಕೊರಲಿನಿಂದ ಖಂಡಿಸಿ, ಈ ಬಗ್ಗೆ ತಿರಸ್ಕೃತಗೊಂಡ ದಾಖಲೆಗಳನ್ನು ಬಹಿರಂಗಪಡಿಸಲು ಒತ್ತಾಯಿಸಲು ನಿರ್ಣಯಿಸಲಾಯಿತು.

19. ಕೇಂದ್ರ ಸರ್ಕಾರದ ಮುಂದಿರುವ **"ವೀರಶೈವ–ಲಿಂಗಾಯತ ಧರ್ಮಕ್ಕೆ" "ಪ್ರತ್ಯೇಕ ಧರ್ಮದ ಮಾನ್ಯತೆ"**ಯನ್ನು ನೀಡಲು ಸನ್ಮಾನ್ಯ ಪ್ರಧಾನಮಂತ್ರಿಗಳನ್ನು ಮತ್ತು ಸನ್ಮಾನ್ಯ ಗೃಹಮಂತ್ರಿಗಳನ್ನು ಒತ್ತಾಯಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಲಾಯಿತು.

20. **ಮಹಾಸಭೆಯ ಸ್ಥಾಪನೆ ಕಾಲದಿಂದ ಅದರ ಧ್ಯೇಯವಾಕ್ಯದಂತೆ** ವೀರಶೈವ–ಲಿಂಗಾಯತ ಭೇದ ನಮಗಿಲ್ಲ, ಧರ್ಮ ಸ್ಥಾಪಕರು ಯಾರೆಂಬ ವಾದ–ವಿವಾದ ನಮಗೆ ಬೇಕಿಲ್ಲ, ಸಮಾಜ ಸಂಘಟನೆಯೇ ನಮ್ಮ ಗುರಿ, ಕಟ್ಟುವುದೇ ನಮ್ಮ ಕೆಲಸ, ಒಡೆಯುವುದಲ್ಲ. ಈ ಬಗ್ಗೆ ಸಮಾಜ ಬಂಧುಗಳು ಗೊಂದಲಕ್ಕೊಳಗಾಗಬಾರದೆಂದು ಮನವಿ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

## 2. ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆ :–

ವರದಿಯ ಅವಧಿಯಲ್ಲಿ ದಿನಾಂಕ: 7–1–2018ರಂದು, ಭಾನುವಾರ ಮಧ್ಯಾಹ್ನ 12.00 ಗಂಟೆಗೆ 2016–17ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯು **"ತರಳಬಾಳು ಕೇಂದ್ರ ಸಭಾಂಗಣ",** 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ(ಬಿ.ಡಿ.ಎ. ಕಾಂಪ್ಲೆಕ್ಸ್ ಪಕ್ಕದಲ್ಲಿ), ಬೆಂಗಳೂರು ಇಲ್ಲಿ ನಡೆದಿರುತ್ತದೆ.

## 3. ವಿಶೇಷ ಸರ್ವಸದಸ್ಯರ ಸಾಮಾನ್ಯ ಸಭೆ :–

ದಿನಾಂಕ: 7–1–2018ರಂದು, ಭಾನುವಾರ ಮಧ್ಯಾಹ್ನ 3.00 ಗಂಟೆಗೆ ವಿಶೇಷ ಸರ್ವಸದಸ್ಯರ ಸಾಮಾನ್ಯ ಸಭೆಯು **"ತರಳಬಾಳು ಕೇಂದ್ರ ಸಭಾಂಗಣ",** 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ತರಳಬಾಳು ಮಾರ್ಗ, ಆರ್.ಟಿ.ನಗರ(ಬಿ.ಡಿ.ಎ. ಕಾಂಪ್ಲೆಕ್ಸ್ ಪಕ್ಕದಲ್ಲಿ), ಬೆಂಗಳೂರು ಇಲ್ಲಿ ನಡೆದಿರುತ್ತದೆ. ಸಂವಿಧಾನ ತಿದ್ದುಪಡಿ ಸಮಿತಿಯ ಶಿಫಾರಸ್ಸಿನ ಮೇರೆಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಒಪ್ಪಿಗೆ ಪಡೆದು ಅಂತಿಮವಾಗಿ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

**4. ಕೃಷಿ ಕಾಯಕ ತ್ರೈಮಾಸಿಕ ಪತ್ರಿಕೆ :–**

ವರದಿಯ ಅವಧಿಯಲ್ಲಿ ಏಪ್ರಿಲ್–ಜೂನ್–2017, ಜುಲೈ–ಸೆಪ್ಟಂಬರ್–2017, ಅಕ್ಟೋಬರ್–ಡಿಸೆಂಬರ್–2017 ಹಾಗೂ ಜನವರಿ–ಮಾರ್ಚ್–2018ರ ನಾಲ್ಕು ತ್ರೈಮಾಸಿಕ ಪತ್ರಿಕೆಗಳು ಸಮಯಾನುಸಾರ ಮುದ್ರಿಸಲ್ಪಟ್ಟು ಚಂದಾದಾರರಿಗೆ ಹಾಗೂ ಸಾರ್ವಜನಿಕರಿಗೆ ಒದಗಿಸಿದೆ. **ಸದಸ್ಯರೆಲ್ಲರೂ ಈ ಪತ್ರಿಕೆಯ ಚಂದಾದಾರರಾಗಬೇಕೆಂದು ಮತ್ತು ಈ ಪತ್ರಿಕೆಯ ಮುದ್ರಣದ ಪ್ರಾಯೋಜಕರಾಗಲು ಕೋರುತ್ತೇವೆ. ಮುದ್ರಣದ ಪ್ರಾಯೋಜಕರಾದರೆ ಪತ್ರಿಕೆಯ "ಪೋಷಕ"ರಾಗುವುದಲ್ಲದೇ ಆ ಪ್ರಕಟಿತ ಪತ್ರಿಕೆಯಲ್ಲಿ ತಮ್ಮ ಪ್ರಾಯೋಜಕತ್ವವನ್ನು ವಿವರಿಸಿ, ತಮ್ಮ ಸ್ವ–ವಿವರಗಳು, ಸಾಧನೆ ಮತ್ತು ಭವಿಷ್ಯದ ಗುರಿಗಳ ಬಗ್ಗೆ ಭಾವಚಿತ್ರ ಸಹಿತ ಪ್ರಕಟಿಸಲಾಗುವುದು.**

**5. ಸದಸ್ಯರ ನೋಂದಣಿ :–**

ದಿನಾಂಕ: 1–4–2017 ರಿಂದ 31–3–2018ರವರೆಗಿನ ಅವಧಿಯಲ್ಲಿ ಎಲ್ಲಾ ವರ್ಗಗಳ **6158** ಸದಸ್ಯರು ನೋಂದಣಿಯಾಗಿದ್ದಾರೆ ಮತ್ತು ದಿನಾಂಕ: 31–03–2018 ರವರೆಗೆ ಎಲ್ಲಾ ವರ್ಗಗಳ ಒಟ್ಟು **1,06,604** ಸದಸ್ಯರು ನೋಂದಾಯಿತರಾಗಿದ್ದಾರೆ. ಸದಸ್ಯರ ನೋಂದಣಿ ಪ್ರಕ್ರಿಯೆಯಲ್ಲಿ ವಿವಿಧ ಘಟಕಗಳ/ವಿಭಾಗಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಮಹಿಳೆಯರು ಹಾಗೂ ಯುವಕರು ಶ್ರಮವಹಿಸಿ ಸದಸ್ಯರನ್ನು ನೋಂದಾಯಿಸಿದ್ದಾರೆ. ಮಹಾಸಭೆ ಅವರೆಲ್ಲರನ್ನು ಅಭಿನಂದಿಸುತ್ತದೆ.

**6. ಮಹಾಸಭೆಯ ಸದಸ್ಯರಿಗೆ "ಗುರುತಿನ ಚೀಟಿ" ವಿತರಿಸುವುದು :–**

ಮಹಾಸಭೆಯ ಸದಸ್ಯರಾದವರಿಗೆ ಅವರ ಭಾವಚಿತ್ರವಿರುವ **"ಗುರುತಿನ ಚೀಟಿ"**ಯನ್ನು ಮಹಾಸಭೆಯಿಂದ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರೆಲ್ಲರೂ ಇತ್ತೀಚಿನ ತಮ್ಮ ಒಂದು ಭಾವಚಿತ್ರ ಒದಗಿಸುವ ಮೂಲಕ ಈ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂದು ಕೋರುತ್ತೇವೆ. ಅಲ್ಲದೇ ಇತರ ಸದಸ್ಯರಿಗೂ ಈ ಬಗ್ಗೆ ಮಾಹಿತಿ ನೀಡಬೇಕೆಂದು ವಿನಂತಿಸುತ್ತೇವೆ.

**7. ಅಖಿಲ ಭಾರತ ವೀರಶೈವ ಮಹಾಸಭೆಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ :–**

ಪ್ರತಿವರ್ಷದಂತೆ 2016–17ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕ ಪಡೆದ ನಮ್ಮ ಸಮಾಜದ ಒಟ್ಟು **3953** ವಿದ್ಯಾರ್ಥಿಗಳಿಗೆ ಕರಡಿಗೆ (ಶಿವಧಾರ, ರುದ್ರಾಕ್ಷಿ, ಲಿಂಗು, ವಸ್ತ್ರ ಸೇರಿ), ಪ್ರಶಂಸಾ ಪತ್ರ ಮತ್ತು ಪ್ರೋತ್ಸಾಹ ಧನ ನೀಡಿ ಪ್ರೋತ್ಸಾಹಿಸಲಾಗಿದೆ.

**8. ಎಲ್ಲ ಜಿಲ್ಲೆಗಳಲ್ಲಿ "ಉಚಿತ ವಿದ್ಯಾರ್ಥಿಗಳ ವಸತಿ ನಿಲಯ" ಹಾಗೂ "ವೀರಶೈವ–ಲಿಂಗಾಯತ ಭವನ"ಗಳ ನಿರ್ಮಾಣ:–**

ಇಂದಿನ ದಿನಮಾನಗಳಲ್ಲಿ ಶಿಕ್ಷಣ ಅತಿ ಮುಖ್ಯವಾಗಿರುತ್ತದೆ. ಉನ್ನತ ಮಟ್ಟದ ಶಿಕ್ಷಣ ಪಡೆಯುವಲ್ಲಿ ಗ್ರಾಮೀಣ ಪ್ರದೇಶದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾಗದೇ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ. ಈ ಸಂಬಂಧ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ **"ಉಚಿತ ವಿದ್ಯಾರ್ಥಿಗಳ ವಸತಿ ನಿಲಯ"**ಗಳನ್ನು ಹಾಗೂ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಘಟಕಗಳು ಕೇಂದ್ರ ಕಛೇರಿಯಂತೆ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು **"ವೀರಶೈವ–ಲಿಂಗಾಯತ ಭವನ"**ಗಳನ್ನು ನಿರ್ಮಾಣ ಮಾಡುವ ಮಹತ್ವದ ಗುರಿಹೊಂದಲಾಗಿದೆ.

ಈ ಉದ್ದೇಶಕ್ಕಾಗಿ ಘಟಕಗಳು ನೋಂದಾಯಿಸುವ ಎಲ್ಲಾ 13 ವರ್ಗಗಳ ಸದಸ್ಯತ್ವದ ಹಣದಲ್ಲಿ ಶೇಕಡ 90ರ ಹಣವನ್ನು ಕೊಡಲಾಗುತ್ತಿದೆ. ಈ ಸೌಲಭ್ಯವನ್ನು ಈಗಾಗಲೇ ವಿಜಾಪುರ, ಧಾರವಾಡ, ಹಾವೇರಿ, ಶಿವಮೊಗ್ಗ, ಗದಗ, ಮೈಸೂರು, ದಾವಣಗೆರೆ, ಕಲಬುರ್ಗಿ ಜಿಲ್ಲಾ ಘಟಕಗಳು ಹಾಗೂ ಆಳಂದ ತಾಲ್ಲೂಕು ಘಟಕ ಪಡೆಯುತ್ತಿವೆ. ಉಳಿದ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವುದು.

**9. ಸಭೆ, ಸನ್ಮಾನ ಹಾಗೂ ಅಭಿನಂದನಾ ಸಮಾರಂಭಗಳು :–**

**(ಎ) ಅಭಿನಂದನಾ ಸಮಾರಂಭ :–**

ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ **"ವಿಶ್ವಗುರು ಬಸವೇಶ್ವರರ"** ಭಾವಚಿತ್ರವನ್ನು ಹಾಕುವಂತೆ ಆದೇಶಿಸಿದ್ದ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ದಿನಾಂಕ: 14–06–2017ರಂದು, ಸಂಜೆ 4 ಗಂಟೆಗೆ **"ಶ್ರೀ ಕೃಷ್ಣ ವಿಹಾರ ಸಭಾಂಗಣ"** (ಗೇಟ್ ನಂ.1), ಬಳ್ಳಾರಿ ರಸ್ತೆ (ಮೇಖ್ರಿ ಸರ್ಕಲ್ ಹತ್ತಿರ), ಬೆಂಗಳೂರು ಇಲ್ಲಿ **"ಅಭಿನಂದನಾ ಸಮಾರಂಭ"**ವನ್ನು ಏರ್ಪಡಿಸಲಾಗಿತ್ತು.

ಸಮಾರಂಭದ ದಿವ್ಯಸಾನ್ನಿಧ್ಯವನ್ನು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಸುತ್ತೂರು ಶ್ರೀಕ್ಷೇತ್ರ, ಮೈಸೂರು ಇವರು ವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಮಹಾಸಭೆಯ ಅಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪನವರು, ಶಾಸಕರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಹಾಸಭೆಯ ನಿಕಟಪೂರ್ವ ಅಧ್ಯಕ್ಷರಾದ ಡಾ. ಭೀಮಣ್ಣ ಖಂಡ್ರೆಯವರು ಹಾಗೂ ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಸಮಾಜದ ಜನಪ್ರತಿನಿಧಿಗಳು, ಮಹಾಸಭೆಯ ಎಲ್ಲಾ ಹಂತದ ಘಟಕಗಳ ಪದಾಧಿಕಾರಿಗಳು, ಸಮಿತಿ ಸದಸ್ಯರುಗಳು, ಸರ್ವಸದಸ್ಯರುಗಳು ಬಹುಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು.

**(ಬಿ) ಮಹಿಳಾ ಜಾಗೃತಿ ಕಾರ್ಯಾಗಾರ :–**

ದಿನಾಂಕ: 17–01–2018ರಂದು ಮಹಾಸಭೆಯ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಸಭಾಂಗಣದಲ್ಲಿ ಬೆಂಗಳೂರಿನ ಅವೇಕ್ ಸಂಸ್ಥೆಯ ಸಹಯೋಗದೊಂದಿಗೆ **"ಮಹಿಳಾ ಜಾಗೃತಿ ಕಾರ್ಯಾಗಾರ"**ವನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಮಹಾಸಭೆಯ ಅಧ್ಯಕ್ಷರಾದ **ಡಾ. ಶಾಮನೂರು ಶಿವಶಂಕರಪ್ಪನವರು** ವಹಿಸಿದ್ದರು. ಮಾಜಿ ಸಚಿವರಾದ **ಶ್ರೀಮತಿ ರಾಣಿ ಸತೀಶರವರು** ಕಾರ್ಯಾಗಾರವನ್ನು ಉದ್ಘಾಟಿಸಿದರು. ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷರಾದ **ಶ್ರೀ ಎನ್. ತಿಪ್ಪಣ್ಣನವರು** ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಅವೇಕ್ ಸಂಸ್ಥೆಯ ಉಪಾಧ್ಯಕ್ಷರಾದ **ಶ್ರೀಮತಿ ಛಾಯಾ ಉಮೇಶಚಂದ್ರರವರು** ಪ್ರಾಸ್ತಾವಿಕವಾಗಿ ಮಾತನಾಡಿ, ಅವೇಕ್ ಸಂಸ್ಥೆಯು ಮಹಿಳೆಯರು ಸಾಮಾಜಿಕವಾಗಿ ಆರ್ಥಿಕಾಭಿವೃದ್ಧಿ ಹೊಂದಿ ಸ್ವಂತ ಕಾಲ ಮೇಲೆ ನಿಲ್ಲುವಂತೆ ಮಾಡುವ ಸಹಕಾರ ಸಂಸ್ಥೆಯಾಗಿದೆ. ಎಲ್ಲ ಕಾಲಕ್ಕೂ, ಎಲ್ಲರಿಗೂ ಬೆನ್ನೆಲುಬಾಗಿ ಸಹಕಾರ, ಸಹಾಯ ಮಾಡುವ ಗುರುತರ ಜವಾಬ್ದಾರಿ ಹೊಂದಿದೆ. ಗ್ರಾಮೀಣ, ನಗರ ಪ್ರದೇಶ, ರಾಜ್ಯ, ರಾಷ್ಟ್ರ, ಅಂತರಾಷ್ಟ್ರಿಯ ಮಟ್ಟದಲ್ಲಿ ತನ್ನ ಕಾರ್ಯವ್ಯಾಪ್ತಿ ಹೊಂದಿರುತ್ತದೆ. ಮಹಿಳೆಯರು ಸ್ವ–ಹುದ್ದಿಮೆ ನಡೆಸಿ, ವರಮಾನ ಬರುವಂತೆ ಸ್ವ–ಸಹಾಯ ಗುಂಪುಗಳಿಗೆ ಪ್ರೋತ್ಸಾಹಿಸುತ್ತಿದೆ. ಗ್ರಾಮೀಣ ಮತ್ತು ನಗರ ಪ್ರದೇಶದ ಮಹಿಳೆಯರಿಗೆ ಉದ್ದಿಮೆಗಳ ಬಗೆಗೆ, ವ್ಯಾಪಾರ ಕೌಶಲ್ಯಗಳ ಬಗ್ಗೆ, ಮಾಹಿತಿ ಒದಗಿಸಿ

ತರಬೇತಿ ನೀಡುತ್ತಿದೆ. ಸರ್ಕಾರ ಮತ್ತು ಇತರ ಸಂಸ್ಥೆಗಳೊಂದಿಗೆ ಸಂಪರ್ಕವಿದ್ದು, ತರಬೇತಿಯೊಂದಿಗೆ ಸಾಲ ಸೌಲಭ್ಯ ಪಡೆಯಲು ಸಹಕರಿಸುತ್ತಿರುವ ಬಗ್ಗೆ ತಿಳಿಸಿದರು. ಈ ಕಾರ್ಯಾಗಾರದಲ್ಲಿ ಮಹಾಸಭೆಯ ಮಹಿಳಾ ವಿಭಾಗದವರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗಪಡೆದುಕೊಂಡರು.

**10. ಕರ್ನಾಟಕ ರಾಜ್ಯ ಘಟಕದ ಕಾರ್ಯಚಟುವಟಿಕೆಗಳು :–**

- ಜಿಲ್ಲಾ ಘಟಕಗಳು ಏರ್ಪಡಿಸುವ **"ಪ್ರತಿಭಾ ಪುರಸ್ಕಾರ"** ಸಮಾರಂಭದಲ್ಲಿ ರಾಜ್ಯ ಘಟಕದ ಪದಾಧಿಕಾರಿಗಳು ಭಾಗವಹಿಸಿದ್ದಾರೆ.
- ಮಹಾಸಭೆಗೆ ಇನ್ನೂ ಸದಸ್ಯರಾಗದೇ ಇರುವವರನ್ನು ಸದಸ್ಯರಾಗುವಂತೆ ಪ್ರೇರೇಪಿಸಲಾಗಿದೆ.
- ಜಿಲ್ಲಾ ಪ್ರವಾಸಗಳಲ್ಲಿ ಒಳಪಂಗಡಗಳ ಭೇದ–ಭಾವ ಮರೆತು ನಾವೆಲ್ಲ ಒಂದೇ. ನಾವೆಲ್ಲ ವೀರಶೈವ–ಲಿಂಗಾಯತರೇ ಎಂದು ಸಮಾಜಬಾಂಧವರಲ್ಲಿ ಅರಿವು ಮೂಡಿಸಲಾಗಿದೆ. ಇದರಿಂದಾಗುವ ಅನುಕೂಲಗಳ ಬಗ್ಗೆಯೂ ಜಾಗೃತಿ ಮೂಡಿಸಲಾಗಿದೆ.

**11. ಕರ್ನಾಟಕ ರಾಜ್ಯದ ಜಿಲ್ಲಾ, ತಾಲ್ಲೂಕು ಹಾಗೂ ಇತರೇ ಘಟಕಗಳ ಕಾರ್ಯಚಟುವಟಿಕೆಗಳು :–**

**ಮೈಸೂರು ಜಿಲ್ಲೆ :–**

- ಮೈಸೂರು ಜಿಲ್ಲಾ ಘಟಕವು 2017–18ನೇ ಸಾಲಿನಲ್ಲಿ 12 ಮಾಸಿಕ ಸಭೆಗಳನ್ನು ನಡೆಸಿ, ಪ್ರತಿ ತಿಂಗಳ 2ನೇ ಶನಿವಾರ ನಿಯಮಬದ್ಧವಾಗಿ ಸಭೆ ಸೇರಿ ಸಮಾಜದ ಸಂಘಟನೆಯ ಬಗ್ಗೆ, ಸಮಾಜದ ಆಗು–ಹೋಗುಗಳ ಬಗ್ಗೆ ಚರ್ಚಿಸುತ್ತಾ, ಸಮಿತಿ ಸದಸ್ಯರ ಅಭಿಪ್ರಾಯದಂತೆ ಆಯಾ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ನಿವಾರಿಸುವ ದಿಕ್ಕಿನಲ್ಲಿ ಜಿಲ್ಲಾ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಅಂತೆಯೇ ಜಿಲ್ಲೆಯ ಎಲ್ಲಾ ತಾಲ್ಲೂಕು ಘಟಕಗಳು ಸಕ್ರಿಯವಾಗಿ ಸಮಾಜದ ಸಂಘಟನೆಯ ದೃಷ್ಟಿಯಿಂದ, ಮಹಾಸಭಾದ ಆಶಯದಂತೆ ಸದಸ್ಯತ್ವ ನೋಂದಣಿ ಮತ್ತು ತಾಲ್ಲೂಕು ಘಟಕಗಳಿಗೆ ನಿವೇಶನ ಹೊಂದುವ ಬಗ್ಗೆ ಹಾಗೂ **ಬಸವ ಭವನ** ನಿರ್ಮಿಸುವ ಬಗ್ಗೆ ಪ್ರಯತ್ನಗಳಾಗಬೇಕೆಂದು ಜಿಲ್ಲಾ ಘಟಕ ಮಾರ್ಗದರ್ಶನ ಮಾಡುತ್ತಿದೆ. ನಂಜನಗೂಡು, ಹೆಚ್.ಡಿ.ಕೋಟೆ, ಕೆ.ಆರ್.ನಗರ, ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಈಗಾಗಲೇ ನಿವೇಶನ ಹೊಂದಲಾಗಿದೆ. ಅಲ್ಲದೇ, ಟಿ.ನರಸೀಪುರದಲ್ಲಿ **ಬಸವ ಭವನ** ನಿರ್ಮಿಸಲಾಗಿದೆ. ಉಳಿದಂತೆ ಮೈಸೂರು ನಗರ ಹಾಗೂ ಹುಣಸೂರು ತಾಲ್ಲೂಕಿನಲ್ಲಿ ನಿವೇಶನ ಹೊಂದುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.
- 2017ರ ಜುಲೈ 20 ರಿಂದ 26 ರವರೆಗೆ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳವರ 150ನೇ ಜಯಂತಿ** ಪ್ರಯುಕ್ತ ಜಿಲ್ಲೆಯಾದ್ಯಂತ ಶೋಭಾಯಾತ್ರೆ ನಡೆಸಿ ಭಕ್ತಿ ಸಮರ್ಪಿಸಲಾಯಿತು. ದಿನಾಂಕ: 20–7–2017ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಮ್ಮುಖದಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಶ್ರೀ ಸುತ್ತೂರು ಮಠದಲ್ಲಿ ನಡೆಸಲಾಗಿತ್ತು.
- ದಿನಾಂಕ: 20–8–2017ರ ಭಾನುವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದ ಆವರಣದಲ್ಲಿ ಬಸವ ಬಳಗಗಳ ಒಕ್ಕೂಟದ ಸಹಯೋಗದೊಂದಿಗೆ ಸಮಾಜದ ಸಂಘಟನೆಗಾಗಿ **"ವೀರಶೈವ–ಲಿಂಗಾಯತ ಚಿಂತಕರ ಕಾರ್ಯಾಗಾರ"** ಎಂಬ ವಿಶೇಷ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರು

ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಮ್ಮುಖದಲ್ಲಿ ಜಿಲ್ಲೆಯ ಹಲವಾರು ಮಠಾಧಿಪತಿಗಳ ಉಪಸ್ಥಿತಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 1000 ಶರಣ–ಶರಣೆಯರು ಪಾಲ್ಗೊಂಡಿದ್ದರು.

- ಮಹಾಸಭೆಯ ಆಶಯದಂತೆ ಸಂಘಟನೆಯ ಹಿತದೃಷ್ಟಿಯಿಂದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಶ್ರೀ ಹೆಚ್.ವಿ.ಬಸವರಾಜರವರ ಅಧ್ಯಕ್ಷತೆಯಲ್ಲಿ ತಾಲ್ಲೂಕುಗಳಲ್ಲಿ ಸಮಾಜದ ಬಗ್ಗೆ ಅರಿವು ಮೂಡಿಸಲು ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

- ದಿನಾಂಕ: 6–2–2018ರ ಮಂಗಳವಾರದಂದು ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಮೈಸೂರು ನಗರ ಮತ್ತು ತಾಲ್ಲೂಕಿನ ಮಠಾಧೀಶರುಗಳ ಸಮ್ಮುಖದಲ್ಲಿ ಹಾಗೂ ಸಮನ್ವಯ ಸಮಿತಿಯವರ ಉಪಸ್ಥಿತಿಯಲ್ಲಿ ನಡೆದ ಮಹಾಸಭಾ, ವೀರಶೈವ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ಸಭೆಯಲ್ಲಿ ಶ್ರೀ ಕೆ.ಶಿವಕುಮಾರ ದೂರ ಇವರನ್ನು 2018ರ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

- ದಿನಾಂಕ: 6–2–2018ರ ಮಂಗಳವಾರ ಮಹಾಸಭೆಯ ಮೈಸೂರು ನಗರ ಘಟಕದ ಸಭೆಯಲ್ಲಿ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ಶ್ರೀ ಟಿ. ಲಿಂಗರಾಜುರವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

- ಮೈಸೂರು ಜಿಲ್ಲಾ ಘಟಕದ ಮಾರ್ಗದರ್ಶನದಲ್ಲಿ 2017ರ **ಬಸವ ಜಯಂತಿ**ಯನ್ನು ವೀರಶೈವ–ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟವು 2017ರ ಏಪ್ರಿಲ್ 28 ರಿಂದ 30 ರವರೆಗೆ ಜಿಲ್ಲಾಡಳಿತದ ಸಹಯೋಗದೊಂದಿಗೆ ಮೈಸೂರಿನ ಕಲಾಮಂದಿರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ವಿಜೃಂಬಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು. ಭಾವಚಿತ್ರಗಳ ಸಮೇತ ಅಲಂಕೃತ ವಾಹನದಲ್ಲಿ ಜಾನಪದ ಕಲಾತಂಡಗಳೊಂದಿಗೆ ನಗರದ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು.

- ದಿನಾಂಕ: 30–04–2017ರಂದಿನ ಸಮಾರೋಪ ಸಮಾರಂಭದಲ್ಲಿ ಕೊಲ್ಲಾಪುರದ ಕನೇರಿಯ ಶ್ರೀಕ್ಷೇತ್ರ ಸಿದ್ದಗಿರಿಯ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರುಗಳಿಗೆ ಸನ್ಮಾನಿಸಲಾಯಿತು. ಸಂಜೆ ಬೆಂಗಳೂರಿನ ಅಂತರರಾಷ್ಟ್ರೀಯ ಸಂಗೀತ ಕಲಾವಿದರಾದ ಶ್ರೀ ಶಂಕರ ಶಾನುಭೋಗ್ ತಂಡದವರಿಂದ ವಚನ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

- ಮೈಸೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ **ಬಸವ ಜಯಂತಿ**ಯನ್ನು ಅರ್ಥಪೂರ್ಣವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲಾಯಿತು.

- ದಿನಾಂಕ: 02–12–2017ರಂದು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ 2016–17ನೇ ಸಾಲಿನ **ಪ್ರತಿಭಾ ಪುರಸ್ಕಾರ**ವನ್ನು ಶ್ರೀ ಸುತ್ತೂರುಮಠದ ಆವರಣ, ಚಾಮುಂಡಿ ಬೆಟ್ಟದ ತಪ್ಪಲು, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು. ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಸಮಾರಂಭವನ್ನು ಉದ್ಘಾಟಿಸಿದರು. ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ, ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆಯೊಂದಿಗೆ ಗೌರವಿಸಲಾಯಿತು.

- ಕರ್ನಾಟಕ ರತ್ನ, ನಡೆದಾಡುವ ದೇವರು, ಶತಾಯುಷಿ ಪರಮಪೂಜ್ಯ ಡಾ. ಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಗಳವರ 110ನೇ ವರ್ಷದ ಜನ್ಮದಿನಾಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಶೋಭಾಯಾತ್ರೆ ಯಶಸ್ವಿಯಾಗಿ ಮೈಸೂರು ಜಿಲ್ಲೆಯಾದ್ಯಂತ ಸಂಚರಿಸಿ, ಜಿಲ್ಲಾ ಘಟಕದ ಕಛೇರಿ ಬಳಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಭಾ ಕಾರ್ಯಕ್ರಮ ನಡೆಸಿ ಗೌರವ ಸಲ್ಲಿಸಲಾಯಿತು. ನಂತರ ಮಜ್ಜಿಗೆ ಮತ್ತು ಪಾನಕ ನೀಡಲಾಯಿತು.

- ಮೈಸೂರು ತಾಲ್ಲೂಕು ಘಟಕದಿಂದ 2017ರ ನವಂಬರ್ ಮಾಹೆಯ ಕಡೇ ಕಾರ್ತಿಕ ಸೋಮವಾರದಂದು ಶ್ರೀ ಮಲೈಮಹದೇಶ್ವರ ಬೆಟ್ಟದಲ್ಲಿ ಬರುವ ಸುಮಾರು 10 ರಿಂದ 15 ಸಾವಿರ ಭಕ್ತಾದಿಗಳಿಗೆ ದಾಸೋಹ ವ್ಯವಸ್ಥೆಯನ್ನು ನಿರಂತರವಾಗಿ ಸುಮಾರು 21 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ ಹಾಗೂ ಶ್ರೀ ಕೊಂಗಳ್ಳಿ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಬೆಟ್ಟ, ತಮಿಳುನಾಡು ಇಲ್ಲಿಗೂ ಸಹ ಸಮಾಜದ ಮುಖಂಡರು ಪರಿಷೆಯೊಂದಿಗೆ ಆಗಮಿಸಿ ಸೇವೆ ಸಲ್ಲಿಸಲಾಗುತ್ತಿದೆ.

**ಶಿವಮೊಗ್ಗ ಜಿಲ್ಲೆ:–**

- ದಿನಾಂಕ: 1–4–2017ರಂದು **"ಯುಗದ ಗುರುವಿಗೆ ಜಗದ ನಮನ"** ಎಂಬ ಶೀರ್ಷಿಕೆಯಡಿ ಸಿದ್ದಗಂಗಾ ಮಠದ **ಪೂಜ್ಯಶ್ರೀ ಶಿವಕುಮಾರ ಸ್ವಾಮಿಗಳ 110ನೇ ಜನ್ಮದಿನೋತ್ಸವ ಕಾರ್ಯಕ್ರಮವನ್ನು** ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಪೂಜ್ಯಶ್ರೀ ಬಸವ ಮರುಳಸಿದ್ದ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಸಿಹಿ ವಿತರಣೆ ಮಾಡಲಾಯಿತು.

- ಶ್ರಾವಣ ಮಾಸದಲ್ಲಿ ಬಸವಕೇಂದ್ರ, ಶಿವಮೊಗ್ಗ ಹಾಗೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ಮಹಾಸಭಾ ಜಿಲ್ಲಾ ಘಟಕ ಶಿವಮೊಗ್ಗ ಇವರ ಸಹಯೋಗದೊಂದಿಗೆ ಒಂದು ವಾರ **"ಶಿವಾನುಭವ ಗೋಷ್ಠಿ"**ಯನ್ನು ಬಸವಕೇಂದ್ರ ಶಿವಮೊಗ್ಗದಲ್ಲಿ ನಡೆಸಲಾಯಿತು.

- ಶಿವಮೊಗ್ಗ ಜಿಲ್ಲಾ ಘಟಕದ ವತಿಯಿಂದ ದಿನಾಂಕ: 5–11–2017ರಂದು ಕುವೆಂಪು ರಂಗಮಂದಿರ, ಶಿವಮೊಗ್ಗ ಇಲ್ಲಿ 2017–18ನೇ ಸಾಲಿನ **ಕೆಳದಿ ಶಿವಪ್ಪನಾಯಕ ಪ್ರಶಸ್ತಿಯನ್ನು** ಹೃದಯವಂತ ಸುಪ್ರಸಿದ್ಧ ಮಕ್ಕಳ ಹೃದಯತಜ್ಞೆ ಬೆಂಗಳೂರಿನ ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ ಇವರಿಗೆ ನೀಡಲಾಯಿತು.

- ದಿನಾಂಕ: 30–03–2018ರಂದು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ಜಾಗದಲ್ಲಿ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಹಾಗೂ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಡಾ. ಮಲ್ಲಿಕಾರ್ಜುನ ಮುರುಘಾರಾಜೇಂದ್ರ ಮಹಾಸ್ವಾಮಿಗಳು, ಬೆಕ್ಕಿನ ಕಲ್ಮಠ, ಆನಂದಪುರಂ, ಶಿವಮೊಗ್ಗ ಮತ್ತು ಷ.ಬ್ರ.ಶ್ರೀ. ಮಹಾಂತ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು ತೊಗರ್ಸಿ, ಶಿಕಾರಿಪುರ ತಾಲ್ಲೂಕು ಇವರುಗಳ ದಿವ್ಯ ಸಾನ್ನಿಧ್ಯದಲ್ಲಿ ಸುಮಾರು ಎರಡು ಕೋಟಿ ರೂ.ಗಳ ಅಂದಾಜಿನ ವಿನ್ಯಾಸವುಳ್ಳ ಕಟ್ಟಡದ ಭೂಮಿ ಪೂಜೆ ನೆರವೇರಿಸಲಾಯಿತು.

**ಬೆಂಗಳೂರು ಗ್ರಾಮಾಂತರ ಜಿಲ್ಲೆ :–**

- ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ವತಿಯಿಂದ ದಿನಾಂಕ: 09–07–2017ರಂದು ಜಯದೇವ ವೀರಶೈವ ಭವನ, ನೆಲಮಂಗಲ ಇಲ್ಲಿ 2016–17ನೇ **"ಪ್ರತಿಭಾ ಪುರಸ್ಕಾರ** ಹಾಗೂ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ**

**150ನೇ ಜನ್ಮದಿನೋತ್ಸವ"** ಸಮಾರಂಭವನ್ನು ಏರ್ಪಡಿಸಲಾಗಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರ ವಿತರಿಸಿ ಪ್ರೋತ್ಸಾಹಿಸಲಾಯಿತು.

**ಚಾಮರಾಜನಗರ ಜಿಲ್ಲೆ:–**

- ಪ್ರತಿವರ್ಷದಂತೆ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ **ಪ್ರತಿಭಾ ಪುರಸ್ಕಾರ** ಸಮಾರಂಭ ಮತ್ತು **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವವನ್ನು** ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳವರ ಸಾಧನೆಗಳನ್ನು ಸ್ಮರಿಸಿ, ಅವರ ಸಾಮಾಜಿಕ ಮತ್ತು ಧಾರ್ಮಿಕ ಸೇವೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಮಹಾಸಭೆಯಿಂದ ಕೊಟ್ಟಂತಹ ಕರಡಿಗೆ, ಚೆಕ್ ಹಾಗೂ ಪ್ರಶಂಸಾ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲೆಯಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪೂಜ್ಯ ಶ್ರೀ ಸರ್ಪಭೂಷಣ ಸ್ವಾಮಿಗಳವರು ಮತ್ತು ಪೂಜ್ಯಶ್ರೀ ಚನ್ನಬಸವಸ್ವಾಮಿಗಳವರ ಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು.

- ದಿನಾಂಕ: 19–03–2018ರಂದು **ಪರಮಪೂಜ್ಯ ಡಾ. ಶ್ರೀಶ್ರೀ ಶಿವಕುಮಾರಸ್ವಾಮಿಗಳವರ ರಥಯಾತ್ರೆಯು** ಚಾಮರಾಜನಗರ ಜಿಲ್ಲೆಗೆ ಆಗಮಿಸಿದ ಸಂದರ್ಭದಲ್ಲಿ ಮಹಾಸಭೆಯ ಜಿಲ್ಲಾ ಪದಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೇರಿ ವಿಜೃಂಭಣೆಯಿಂದ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಪಟ್ಟಣಗಳ ಮುಖ್ಯರಸ್ತೆಗಳಲ್ಲಿ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಾಯಿತು.

- ಜಿಲ್ಲಾ ಘಟಕದಿಂದ ನಡೆದಾಡುವ ದೇವರೆಂದೇ ಪ್ರಸಿದ್ಧರಾದ ಸಿದ್ಧಗಂಗಾಮಠದ ಡಾ. ಶ್ರೀಶ್ರೀ ಶಿವಕುಮಾರಸ್ವಾಮಿಗಳ ಜಯಂತಿಯನ್ನು ಸಿದ್ಧಮಲ್ಲೇಶ್ವರ ವಿರಕ್ತಮಠದ ಶ್ರೀಗಳಾದ ಶ್ರೀ ಚನ್ನಬಸವಸ್ವಾಮಿಗಳ ಸಾನ್ನಿಧ್ಯದಲ್ಲಿ ಮಜ್ಜಿಗೆ, ಪಾನಕ, ಉಪಹಾರ ವಿತರಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

- ಚಾಮರಾಜನಗರ ತಾಲ್ಲೂಕು ಘಟಕದಿಂದ **ರಕ್ತದಾನ ಶಿಬಿರ** ಹಾಗೂ **ಮಧುಮೇಹ(ಸಕ್ಕರೆ), ಹೃದಯಕ್ಕೆ** ಸಂಬಂಧಿಸಿದ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿತ್ತು.

- ಜಿಲ್ಲಾ ಘಟಕದವತಿಯಿಂದ **ಬಸವ ಜಯಂತಿಯನ್ನು** ವಿಜೃಂಭಣೆಯಿಂದ ಆಚರಿಸಲಾಯಿತು. ನಂತರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡಿದ್ದೆವು.

- ಗುಂಡ್ಲುಪೇಟೆ ತಾಲ್ಲೂಕು ಘಟಕದವತಿಯಿಂದ **ಬಸವ ಜಯಂತಿ** ಕಾರ್ಯಕ್ರಮವನ್ನು ಪೂಜ್ಯಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಆಚರಿಸಲಾಯಿತು.

- ತಾಲ್ಲೂಕಿನ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಸ್ವಚ್ಛತಾ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

- ಹರವೆ ಮಠದಲ್ಲಿ ವೀರಶೈವ–ಲಿಂಗಾಯತ ಚಿಂತನ–ಮಂಥನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

- ಮರಿಯಾಲದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ವೀರಶೈವ–ಲಿಂಗಾಯತ ವಟುಗಳಿಗೆ **ಲಿಂಗದೀಕ್ಷೆ** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

- ಚಾಮರಾಜನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠದಲ್ಲಿ ಶ್ರೀಮನ್ನಿರಂಜನ **ಶ್ರೀ ಗುರುಮಲ್ಲೇಶ್ವರರ 119ನೇ ಸಂಸ್ಮರಣ ಮಹೋತ್ಸವವನ್ನು** ಹಮ್ಮಿಕೊಳ್ಳಲಾಯಿತು.

**ಗದಗ ಜಿಲ್ಲೆ:–**

- ಜಿಲ್ಲಾ ಘಟಕದಿಂದ **ಬಸವ ಜಯಂತಿ**ಯನ್ನು ಅರ್ಥಪೂರ್ಣವಾಗಿ ಪೂಜ್ಯಶ್ರೀ ಜಗದ್ಗುರು ತೋಂಟದಾರ್ಯ ಸಿದ್ಧಲಿಂಗಮಹಾಸ್ವಾಮಿಗಳ ನೇತೃತ್ವದಲ್ಲಿ ನಗರದ ಮುಖ್ಯರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ನಂತರ ಉಪನ್ಯಾಸವನ್ನು ಏರ್ಪಡಿಸಿ ಶರಣರ ತತ್ವಾದರ್ಶಗಳನ್ನು ಎಲ್ಲರಿಗೂ ತಿಳಿಸಲಾಯಿತು.

- ಪ್ರತಿವರ್ಷದಂತೆ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ **ಪ್ರತಿಭಾ ಪುರಸ್ಕಾರ**ವನ್ನು ಹಮ್ಮಿಕೊಂಡು, ಮಹಾಸಭೆಯು ಕೊಟ್ಟಂತಹ ಪ್ರಶಂಸಾಪತ್ರ, ಚೆಕ್ ಹಾಗೂ ಕರಡಿಗೆಗಳನ್ನು ವಿತರಿಸಲಾಯಿತು.

- ಮಹಾಸಭೆಯ ಸಂಸ್ಥಾಪಕರಾದ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳವರ 150ನೇ ಜಯಂತ್ಯೋತ್ಸವ**ವನ್ನು ಶ್ರೀ ವೀರಭದ್ರೇಶ್ವರ ಕಲ್ಯಾಣಮಂಟಪದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬೆಂಗಳೂರಿನಿಂದ ಮಹಾಸಭೆಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಎನ್.ತಿಪ್ಪಣ್ಣನವರು ಹಾಗೂ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎಂ.ರೇಣುಕ ಪ್ರಸನ್ನ ಇವರುಗಳು ಭಾಗವಹಿಸಿದ್ದರು.

**ಹಾವೇರಿ ಜಿಲ್ಲೆ :–**

- ಹಾವೇರಿ ಜಿಲ್ಲಾ ಘಟಕ ಮತ್ತು ಬಸವ ಬಳಗದ ವತಿಯಿಂದ ದಿನಾಂಕ: 29–04–2017ರಂದು **ಜಗಜ್ಯೋತಿ ಬಸವೇಶ್ವರ ಜಯಂತಿ**ಯಂದು ಬಸವೇಶ್ವರರ ಮೂರ್ತಿಗೆ ಮಾಲಾರ್ಪಣೆ ಮಾಡಿ ಬಸವ ಭವನದಲ್ಲಿ ಸಭೆ ನಡೆಸಲಾಯಿತು.

- ದಿನಾಂಕ: 28–01–2018ರಂದು 2016–17ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ **ಪ್ರತಿಭಾ ಪುರಸ್ಕಾರ** ಸಮಾರಂಭವನ್ನು ಹಮ್ಮಿಕೊಂಡು, ಮಹಾಸಭೆಯು ಕೊಟ್ಟಂತಹ ಪ್ರಶಂಸಾಪತ್ರ, ಚೆಕ್ ಮತ್ತು ಕರಡಿಗೆಗಳನ್ನು ವಿತರಿಸಲಾಯಿತು. ಇದೇ ಸಂದರ್ಭದಲ್ಲಿ **ಪೂಜ್ಯಶ್ರೀ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವವನ್ನು** ಆಚರಿಸಲಾಯಿತು. ಕಾರ್ಯಕ್ರಮದ ಸಾನ್ನಿಧ್ಯವನ್ನು ಪೂಜ್ಯಶ್ರೀ ಬಸವಶಾಂತಲಿಂಗ ಸ್ವಾಮಿಜಿಯವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಸಮಾಜದ ಪ್ರಮುಖ ಸಾಮಾಜಿಕ ಕಾರ್ಯಕರ್ತರಿಗೆ ಸನ್ಮಾನಿಸಲಾಯಿತು.

- ಜಿಲ್ಲೆಯಲ್ಲಿ ನಿರ್ಮಿಸುತ್ತಿರುವ **ಸಮುದಾಯ ಭವನ** ಮತ್ತು **ವಿದ್ಯಾರ್ಥಿ ವಸತಿ ನಿಲಯ** ಕಟ್ಟಡಕ್ಕೆ ದೇಣಿಗೆ ಸಂಗ್ರಹಿಸಲು ಜಿಲ್ಲಾ ಪ್ರವಾಸಕೈಗೊಳ್ಳಲಾಗಿತ್ತು. ಅಂತೆಯೇ ಜಿಲ್ಲಾ ಘಟಕದ ಕಾರ್ಯನಿರ್ವಾಹಕ ಸಮಿತಿ ಸಭೆಯನ್ನು ಕರೆದು ಪ್ರಗತಿಯಲ್ಲಿರುವ ಕಾಮಗಾರಿ ಬಗ್ಗೆ, ದೇಣಿಗೆ ಸಂಗ್ರಹಿಸುವ ಬಗ್ಗೆ ಹಾಗೂ ಸಮಾಜದ ಸಂಘಟನೆ ಬಗ್ಗೆ ಚರ್ಚಿಸಲಾಗಿದೆ.

**ವಿಜಯಪುರ ಜಿಲ್ಲೆ :–**

- ದಿನಾಂಕ: 31–12–2017ರಂದು ಲಿಂಗಾಯತ ಸಾಂಸ್ಕೃತಿಕ ಸಮುದಾಯ ಭವನ, ವಿಜಯಪುರ ಇಲ್ಲಿ 2016–17ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ

ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ **ಪ್ರತಿಭಾ ಪುರಸ್ಕಾರ** ಸಮಾರಂಭವನ್ನು ಆಯೋಜಿಸಿ, ಮಹಾಸಭೆಯು ಕೊಟ್ಟಂತಹ ಪ್ರಶಂಸಾ ಪತ್ರ, ಚೆಕ್ ಮತ್ತು ಕರಡಿಗೆಗಳನ್ನು ವಿತರಿಸಲಾಯಿತು.

- ಜಿಲ್ಲೆಯಲ್ಲಿ ನಿರ್ಮಿಸುತ್ತಿದ್ದ **ಲಿಂಗಾಯತ ಸಾಂಸ್ಕೃತಿಕ ಸಮುದಾಯ ಭವನಕ್ಕೆ** ದೇಣಿಗೆ ಸಂಗ್ರಹಿಸಲು ಜಿಲ್ಲಾ ಪ್ರವಾಸಕೈಗೊಳ್ಳಲಾಗಿತ್ತು ಮತ್ತು ಜಿಲ್ಲಾ ಘಟಕದ ಕಾರ್ಯನಿರ್ವಾಹಕ ಸಮಿತಿ ಸಭೆಯನ್ನು ಕರೆದು ಪ್ರಗತಿಯಲ್ಲಿರುವ ಕಾಮಗಾರಿ ಬಗ್ಗೆ, ದೇಣಿಗೆ ಸಂಗ್ರಹಿಸುವ ಬಗ್ಗೆ ಹಾಗೂ ಸಮಾಜದ ಸಂಘಟನೆ ಬಗ್ಗೆ ಚರ್ಚಿಸಲಾಗಿದೆ.
- ಜಿಲ್ಲಾ ಘಟಕದಿಂದ **ವಿಶ್ವಗುರು ಬಸವಣ್ಣನವರ ಜಯಂತಿ**ಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

**ಬಳ್ಳಾರಿ ಜಿಲ್ಲೆ :–**

- ಜಿಲ್ಲಾ ಘಟಕ, ಹಲವು ಧಾರ್ಮಿಕ ಸಂಸ್ಥೆ ಮತ್ತು ಸಂಘಟನೆಗಳೊಂದಿಗೆ ಈ ಬಾರಿಯ **ಬಸವ ಜಯಂತಿ**ಯನ್ನು ಅದ್ದೂರಿಯಾಗಿ ಆಚರಿಸಲಾಯಿತು.
- 2016–17ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಗಳಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ **ಪ್ರತಿಭಾ ಪುರಸ್ಕಾರ** ಸಮಾರಂಭವನ್ನು ಆಯೋಜಿಸಿ, ಮಹಾಸಭೆಯು ಕೊಟ್ಟಂತಹ ಪ್ರಶಂಸಾ ಪತ್ರ, ಚೆಕ್ ಮತ್ತು ಕರಡಿಗೆಗಳನ್ನು ನೀಡಿ ಗೌರವಿಸಲಾಯಿತು.

**ಕೋಲಾರ ಜಿಲ್ಲೆ:–**

- ಜಿಲ್ಲಾ ಘಟಕದಿಂದ ದಿನಾಂಕ: 1–4–2017ರಂದು **ಡಾ. ಶ್ರೀಶ್ರೀ ಶಿವಕುಮಾರ ಸ್ವಾಮಿಗಳ 110ನೇ ಜನ್ಮದಿನೋತ್ಸವ** ಅಂಗವಾಗಿ ಪೂಜ್ಯರ ಭಾವಚಿತ್ರಕ್ಕೆ ಪೂಜೆಮಾಡಿ ಸಿಹಿ ಹಂಚಲಾಯಿತು. ನಂತರ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಬ್ರೆಡ್ ಮತ್ತು ಹಣ್ಣುಗಳನ್ನು ವಿತರಿಸಿ, ಅನ್ನದಾನ ಏರ್ಪಡಿಸಲಾಗಿತ್ತು.
- ಜಿಲ್ಲಾ ಘಟಕದಿಂದ ದಿನಾಂಕ: 26–4–2017 ರಿಂದ 29–4–2017ರವರೆಗೆ **ಶ್ರೀ ಬಸವೇಶ್ವರ ಜಯಂತೋತ್ಸವದ** ಅಂಗವಾಗಿ ಪ್ರತಿದಿನ ನಾಡಿನ ಪ್ರಖ್ಯಾತ ಕಲಾವಿದರಿಂದ ನೃತ್ಯರೂಪಕ, ಭರತನಾಟ್ಯ, ಜಾನಪದ ನೃತ್ಯರೂಪಕ, ವಚನಗಾಯನ ಮತ್ತು ಸುಗಮ ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.
- ದಿನಾಂಕ: 26–4–2017ರಂದು **ಬಸವಜಯಂತಿ** ಅಂಗವಾಗಿ ನಾಟ್ಯಾಂಜಲಿ ನೃತ್ಯ ಕಲಾ ಅಕಾಡೆಮಿ ಮತ್ತು ಕೈವಾರದ ಶ್ರೀಮತಿ ಪರಿಮಳ ಅರಳುಮಲ್ಲಿಗೆ ತಂಡದವರಿಂದ ಭರತನಾಟ್ಯ ಮತ್ತು ಜಾನಪದ ಗೀತೆಗಳ ನೃತ್ಯರೂಪಕವನ್ನು ಮತ್ತು ದಿನಾಂಕ: 27–4–2017ರಂದು ಬೆಂಗಳೂರಿನ ಖ್ಯಾತ ಕಲಾವಿದರಾದ ಶ್ರೀ ಈರಯ್ಯ ಚಿಕ್ಕಮಠ ಹಾಗೂ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ಮತ್ತು ದಿನಾಂಕ: 28–4–2017ರಂದು ಸೂರ್ಯ ಆರ್ಟ್ಸ್ ಇಂಟರ್ ನ್ಯಾಷನಲ್ ಕ್ರಿಯೇಷನ್ಸ್, ಬೆಂಗಳೂರು ಇವರು ಸಾದರ ಪಡಿಸಿದ ಜಾನಪದ ನೃತ್ಯಗಳು ಹಾಗೂ ಭೂಕೈಲಾಸ ನೃತ್ಯ ರೂಪಕ ಏರ್ಪಡಿಸಲಾಗಿತ್ತು.
- ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಂದ ದಿನಾಂಕ: 29–4–2017ರಂದು ಅಕ್ಷಯ ತೃತೀಯ ದಿನದಂದು **ಬಸವೇಶ್ವರ ಸ್ವಾಮಿಗೆ** ಮಹಾರುದ್ರಾಭಿಷೇಕ, ಶತಸಹಸ್ರನಾಮ, ಮಹಾಮಂಗಳಾರತಿ ಹಾಗೂ ಮಧ್ಯಾಹ್ನ ಅನ್ನದಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಜೆ ಶ್ರೀ ಅಶ್ವಾರೂಢ ಬಸವೇಶ್ವರ ಸ್ವಾಮಿಯ ಮುತ್ತಿನ ಪಲ್ಲಕ್ಕಿ ಉತ್ಸವದ ಮೆರವಣಿಗೆಯನ್ನು ನಂದಿಧ್ವಜ, ವೀರಗಾಸೆ, ಕರಡಿಮಜಲು ಹಾಗೂ ಡೋಳ್ಳು ಕುಣಿತ ಕಲಾತಂಡಗಳೊಂದಿಗೆ ನೆರವೇರಿಸಲಾಯಿತು.

- ದಿನಾಂಕ 9-7-2017ರಂದು ಶ್ರೀಮತಿ ಅಕ್ಕಚ್ಚಮ್ಮ ಶ್ರೀ ಬಿ.ಎಸ್.ನಂಜುಂಡಯ್ಯ ವೀರಶೈವ ಕಲ್ಯಾಣ ಮಂಟಪದ ಟ್ರಸ್ಟ್ (ರಿ.) ವತಿಯಿಂದ ಬಂಗಾರಪೇಟೆ ತಾಲ್ಲೂಕಿಗೆ ಸಂಬಂಧಪಟ್ಟಂತೆ 2017ನೇ ಸಾಲಿನಲ್ಲಿ ಉತ್ತೀರ್ಣರಾದ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಸಮಾರಂಭವನ್ನು ಆಯೋಜಿಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

- ದಿನಾಂಕ: 27-8-2017 ರಿಂದ 30-8-2017 ರವರೆಗೆ ಶ್ರೀ ಬಸವೇಶ್ವರಸ್ವಾಮಿ ದೇವಾಲಯದಲ್ಲಿ **ಗೌರಿ-ಗಣೇಶ ಹಬ್ಬ**ವನ್ನು ಆಚರಿಸಿ, 3 ದಿನಗಳ ಕಾಲ ಶ್ರೀ ಷಷ್ಠಿ ಕೇದಾರ ಗೌರಿ ವ್ರತವನ್ನು ಆಚರಿಸಿ, ಪ್ರಸಾದದ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು.

- ಜಿಲ್ಲಾ ಮತ್ತು ತಾಲ್ಲೂಕು ಘಟಕಗಳಿಂದ ದಿನಾಂಕ: 21-9-2017 ರಿಂದ 30-9-2017 ರವರೆಗೆ ನವರಾತ್ರಿಯ ವಿಶೇಷ ಅಲಂಕಾರವನ್ನು ಹನ್ನೊಂದು ದಿನಗಳ ಕಾಲ ಶ್ರೀ ಬಸವೇಶ್ವರಸ್ವಾಮಿಗೆ ವಿವಿಧ ರೀತಿಯ ಅಲಂಕಾರಗಳನ್ನು ಮಾಡಲಾಯಿತು ಹಾಗೂ ಪ್ರಸಾದದ ವ್ಯವಸ್ಥೆಯನ್ನು ಆಯೋಜಿಸಲಾಗಿತ್ತು.

- ಜಿಲ್ಲಾ ಘಟಕದಿಂದ ದಿನಾಂಕ 31-12-2017ರಂದು 2016-17ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ **'ಪ್ರತಿಭಾ ಪುರಸ್ಕಾರ'** ಮತ್ತು ಮಹಾಸಭೆಯ ಸಂಸ್ಥಾಪಕರಾದ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವ ಸಮಾರಂಭ**ವನ್ನು ಆಯೋಜಿಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟಂತಹ ಪ್ರಶಂಸಾಪತ್ರ, ಚೆಕ್ ಮತ್ತು ಕರಡಿಗೆಗಳನ್ನು ನೀಡಿ ಗೌರವಿಸಲಾಯಿತು.

- ಜಿಲ್ಲಾ ಘಟಕದಿಂದ ಪ್ರತಿವರ್ಷದಂತೆ ಈ ಸಾರಿಯು ದೀಪಾವಳಿ ಹಬ್ಬದಂದು ದೇವಸ್ಥಾನದಲ್ಲಿ **ಕೇದಾರೇಶ್ವರ ನೊಂಪಿ ಹಬ್ಬ**ವನ್ನು ಆಚರಿಸಲಾಯಿತು. ಹಾಗೇಯೇ ಲಕ್ಷದೀಪೋತ್ಸವ, ಸಂಕ್ರಾಂತಿ, ಭಾರತ ಹುಣ್ಣಿಮೆ ಮತ್ತು ಶಿವರಾತ್ರಿ ಹಬ್ಬಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಲಾಯಿತು.

- ದಿನಾಂಕ: 24-12-2017ರಂದು ಬಿ.ಇ.ಎಂ.ಎಲ್. ಕೆ.ಜಿ.ಎಫ್ ವಿಭಾಗದಲ್ಲಿರುವ ಶ್ರೀ ಬಸವ ಸಮಿತಿ (ರಿ.) ಆಶ್ರಯದಲ್ಲಿ ಶ್ರೀ **ಜಗಜ್ಯೋತಿ ಬಸವೇಶ್ವರ** ಹಾಗೂ **ಶರಣೆ ಅಕ್ಕಮಹಾದೇವಿ ಜಯಂತ್ಯೋತ್ಸವ** ಮತ್ತು **ಪ್ರತಿಭಾ ಪುರಸ್ಕಾರ** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

- ಬಂಗಾರಪೇಟೆ ತಾಲ್ಲೂಕು ಕೆಸರನಹಳ್ಳಿ ಗ್ರಾಮದಲ್ಲಿ 53ನೇ ವರ್ಷದ **ಬಸವೇಶ್ವರ ಜಯಂತಿ**ಯನ್ನು ದಿನಾಂಕ: 30-4-2017 ಮತ್ತು 1-5-2017ರ ಎರಡು ದಿನಗಳ ಕಾಲ ಕ್ರಮವಾಗಿ **ಶ್ರೀ ಬಸವಣ್ಣನವರ ನೃತ್ಯ ರೂಪಕ** ಮತ್ತು **ಮುತ್ತಿನ ಪಲ್ಲಕ್ಕಿ ಉತ್ಸವವನ್ನು** ವಿಜೃಂಭಣೆಯಿಂದ ಆಚರಿಸಲಾಯಿತು. ನಂತರ ಪ್ರಸಾದದ ವ್ಯವಸ್ಥೆ ಏರ್ಪಡಿಸಲಾಗಿತ್ತು.

- ದಿನಾಂಕ: 11-4-2017ರಂದು ಅಕ್ಕನ ಬಳಗದ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ಸಾರಿಯು **'ಪರಮ ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ'** ಆಚರಿಸಲಾಯಿತು. ಸಮಾಜದ ಶರಣ/ಶರಣೆಯರೆಲ್ಲರೂ ಕೂಡಿ ಅಕ್ಕಮಹಾದೇವಿಗೆ ಅಭಿಷೇಕ, ಪುಷ್ಪಾರ್ಚನೆ ಹಾಗೂ ಸಾಮೂಹಿಕ ಪ್ರಾರ್ಥನೆ ಮತ್ತು ಪ್ರಸಾದದ ವ್ಯವಸ್ಥೆ ಆಯೋಜಿಸಲಾಗಿತ್ತು.

- ಪ್ರತಿ ಹುಣ್ಣಿಮೆ ದಿನದಂದು ಶರಣೆಯರೆಲ್ಲಾ ಒಟ್ಟಿಗೆ ಸೇರಿ **ಸಾಮೂಹಿಕ ಪ್ರಾರ್ಥನೆ** ಹಾಗೂ ಅಕ್ಕಮಹಾದೇವಿಗೆ ವಿಶೇಷ ಪೂಜೆ ಹಾಗೂ ಪ್ರಸಾದದ ಕಾರ್ಯಕ್ರಮಗಳನ್ನು ನಡೆಸಲಾಯಿತು.

- ಪ್ರತಿ ವರ್ಷದಂತೆ ಈ ಸಾರಿಯು ಬಡ ಹೆಣ್ಣುಮಕ್ಕಳಿಗೆ **ಹೊಲಿಗೆ ಶಾಲೆ** ಹಾಗೂ **ವಾತ್ಸಲ್ಯ ಮಕ್ಕಳ ಪೋಷಣಾ ಕೇಂದ್ರ ಶಾಲೆಗಳನ್ನು** ಪ್ರಾರಂಭಿಸಿ ನಡೆಸಿಕೊಂಡು ಬರಲಾಗುತ್ತಿದೆ. 15 ವರ್ಷದ ಒಳಪಟ್ಟ ಮಕ್ಕಳಿಗೆ ವಚನ ಗಾಯನ ಸ್ಪರ್ಧೆ ಏರ್ಪಡಿಸಿದ್ದು ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

- ಮುಳಬಾಗಿಲು ತಾಲ್ಲೂಕು ಘಟಕದ ವತಿಯಿಂದ 1-4-2016ರಂದು ಶ್ರೀ ಸಿದ್ಧಗಂಗಾ ಶ್ರೀಗಳವರ 109ನೇ ವರ್ಷದ ಹುಟ್ಟುಹಬ್ಬವನ್ನು ತಾಲ್ಲೂಕಿನ ಪ್ರಮುಖರೆಲ್ಲರೂ ಕೂಡಿ ಶ್ರೀಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸಿಹಿ ಹಂಚಿ ಆಚರಿಸಲಾಯಿತು.

- ಅಕ್ಕಮಹಾದೇವಿ ಭವನದಲ್ಲಿ ವಿದ್ವಾಂಸರಿಂದ ಪ್ರವಚನಗಳು ಹಾಗೂ ಮಕ್ಕಳಿಗೆ ನೃತ್ಯ ಮತ್ತು ಸಂಗೀತ ಪಾಠಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

- ಕೋಲಾರ ತಾಲ್ಲೂಕು ಘಟಕದಿಂದ ದಿನಾಂಕ: 1-4-2017ರಂದು **ಶ್ರೀಶ್ರೀ ಡಾ. ಶಿವಕುಮಾರ ಮಹಾಸ್ವಾಮಿಗಳವರ 110ನೇ ಜನ್ಮದಿನೋತ್ಸವವನ್ನು** ಆಚರಿಸಿ ಸಹಿ ಹಂಚಲಾಯಿತು.

- ಕೋಲಾರ ತಾಲ್ಲೂಕು ಘಟಕದಿಂದ ದಿನಾಂಕ: 26-4-2017 ಹಾಗೂ 27-4-2017ರಂದು ಎರಡು ದಿನ ಪ್ರಖ್ಯಾತ ಕಲಾವಿದರಿಂದ ನೃತ್ಯರೂಪಕ, ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

- ಮುಳಬಾಗಿಲು ತಾಲ್ಲೂಕು ವೀರಶೈವ ಟ್ರಸ್ಟ್ ಆಶ್ರಯದಲ್ಲಿ **ಶ್ರೀಶ್ರೀಶ್ರೀ ಶಿವಕುಮಾರಸ್ವಾಮಿಯವರ ಹುಟ್ಟು ಹಬ್ಬವನ್ನು** ಪ್ರತಿವರ್ಷದಂತೆ ಏಪ್ರಿಲ್ 1ರಂದು ಶ್ರೀ ಅಂದಡಿ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಅತಿ ವಿಜೃಂಭಣೆಯಿಂದ ನಡೆಸಲಾಯಿತು. ಪೂಜ್ಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅಂದಡಿ ವೀರಭದ್ರಸ್ವಾಮಿ ದೇವರಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ರುದ್ರಹೋಮ ಮತ್ತು ಭದ್ರಕಾಳಿ ಅಮ್ಮನವರಿಗೆ ಅಭಿಷೇಕ ಮಹಾಮಂಗಳಾರತಿ ಪ್ರಸಾದ ವಿನಿಯೋಗ ನೆರವೇರಿಸಲಾಯಿತು.

- ಶ್ರೀಶ್ರೀಶ್ರೀ ಶಿವಕುಮಾರಸ್ವಾಮಿಯವರ ಹುಟ್ಟು ಹಬ್ಬದ ಪ್ರಯುಕ್ತ ಅರಣ್ಯದಲ್ಲಿ ವನ್ಯಜೀವಿಗಳಿಗೆ ತರಕಾರಿ, ಬಾಳೆಹಣ್ಣು, ಬ್ರೆಡ್ ನೀಡಿ, ಅಂಧಮಕ್ಕಳಿಗೆ ಶಾಲೆಯಲ್ಲಿ ಹಣ್ಣು, ಹಾಲು, ಬ್ರೆಡ್ ಹಂಚಲಾಯಿತು ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಹಾಲು ಮತ್ತು ಬ್ರೆಡ್ ವಿತರಿಸಲಾಯಿತು.

- **'ಬಸವೇಶ್ವರ ಜಯಂತಿ'** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ಪ್ರಯುಕ್ತ ಪ್ರತಿ ವರ್ಷದಂತೆ ಸೂರ್ಯೋದಯಪೂರ್ವ ವೀರಭದ್ರಸ್ವಾಮಿಯವರಿಗೆ ಕಳಸ ಸ್ಥಾಪನೆ, ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ, ಭದ್ರಕಾಳಿ ಅಮ್ಮನವರಿಗೆ ಕುಂಕುಂಮಾರ್ಚನೆ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ಮಾಡಲಾಯಿತು.

- ಮುಳಬಾಗಿಲು ತಹಸೀಲ್ದಾರ್ ಮತ್ತು ತಾಲ್ಲೂಕು ದಂಡಾಧಿಕಾರಿಗಳು ಇವರ ಕಛೇರಿಯಲ್ಲಿ **'ಬಸವೇಶ್ವರ ಜಯಂತಿ'** ಕಾರ್ಯಕ್ರಮದಲ್ಲಿ ಭಾಗವಹಿಸಿ, ಅಧಿಕಾರಿಗಳಿಂದ ಬಸವಣ್ಣನವರ ತತ್ವಾದರ್ಶಗಳನ್ನು ಕೇಳಿ ನಂತರ ಭಕ್ತಾದಿಗಳಿಗೆ ಕೊಸಂಬರಿ, ಪಾನಕ ಮತ್ತು ಮಜ್ಜಿಗೆ ವಿತರಿಸಲಾಯಿತು.

**ಬಾಗಲಕೋಟೆ ಜಿಲ್ಲೆ :-**

- ಮಹಾಸಭೆಯ ಸದಸ್ಯತ್ವದ ಅಭಿಯಾನ ಮುಂದುವರೆಸಿದ್ದು ಇನ್ನೂ ಹೆಚ್ಚು ಸದಸ್ಯರನ್ನು ಹೊಂದುವ ಪ್ರಯತ್ನ ನಡೆದಿದೆ. ತಾಲ್ಲೂಕುಗಳ ಪದಾಧಿಕಾರಿಗಳ ಸಭೆ ಕರೆದು ಕೇಂದ್ರ ಸಮಿತಿಯಿಂದ ಬಂದ ಸುತ್ತೋಲೆ, ವರದಿಗಳ ಅನುಷ್ಠಾನಕ್ಕೆ ತಿಳಿಸಲಾಗಿದೆ.

- ಜಿಲ್ಲಾ ಘಟಕದಿಂದ ದಿನಾಂಕ: 21-04-2017ರಂದು ಬಾಗಲಕೋಟೆಯಲ್ಲಿ **"ಮಹಾತ್ಮ ಬಸವೇಶ್ವರರ ಜಯಂತ್ಯೋತ್ಸವ"**ವನ್ನು ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಆಚರಿಸಲಾಯಿತು.

ಬಸವಣ್ಣನವರ ಭಾವಚಿತ್ರವನ್ನು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಲವು ರೂಪಕಗಳು ಜನರನ್ನು ಆಕರ್ಷಿಸಿದವು.

- ದಿನಾಂಕ: 27-03-2018 ರಿಂದ 31-03-2018ರವರೆಗೆ **"ವೀರವಿರಾಗಿಣಿ ಅಕ್ಕಮಹಾದೇವಿಯ ಜಯಂತಿ"**ಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಾಮಾಜಿಕ, ಧಾರ್ಮಿಕ ಜಾಗೃತಿಯನ್ನುಂಟು ಮಾಡಿದ್ದು ವಿಶೇಷವಾಗಿತ್ತು.

- ಜಿಲ್ಲಾ ಘಟಕವು ತಾಲ್ಲೂಕು ಜಂಗಮ ಸಮಾಜದ ನೇತೃತ್ವದಲ್ಲಿ ದಿನಾಂಕ: 28-2-2018ರಂದು **"ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ"**ಯನ್ನು ಆಚರಿಸಲಾಯಿತು. ಶ್ರೀ ರೇಣುಕರ ಭಾವಚಿತ್ರದ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ಅಸಂಖ್ಯಾತ ಸಕಲ ಸಮಾಜದ ಜನತೆಯ ಸಮ್ಮುಖದಲ್ಲಿ ಜರುಗಿಸಲಾಯಿತು.

- ಜಿಲ್ಲಾ ಘಟಕವು ಮನೆ ಅಂಗಳದಲ್ಲಿ **ಶರಣ ಸಾಹಿತ್ಯ** ಕಾರ್ಯಕ್ರಮವನ್ನು ಶರಣ ಸಾಹಿತ್ಯ ಪರಿಷತ್ತಿನೊಂದಿಗೆ ಪ್ರತಿ ಶನಿವಾರದಂದು ಸಾಯಂಕಾಲ ಒಬ್ಬ ಶರಣರ ಮನೆಯಲ್ಲಿ ಏರ್ಪಡಿಸುತ್ತಾ ಬರಲಾಗಿದೆ. ಅಂದು ವಿದ್ವಾಂಸರೊಬ್ಬರಿಂದ ಒಂದು ವಚನದ ವಿಶ್ಲೇಷಣೆ ಜರುಗಿ ಅದರ ಬಗ್ಗೆ ಎಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿರುವುದು 12ನೇ ಶತಮಾನದ ಅನುಭಾವ ಗೋಷ್ಠಿ ನೆನಪಿಗೆ ತರುವಂತಿದೆ.

- ದಿನಾಂಕ: 24-7-2017 ರಿಂದ 23-8-2017ರವರೆಗೆ ಶ್ರೀ ಕಣವಿ ವೀರಭದ್ರೇಶ್ವರ ಟ್ರಸ್ಟ್, ಬಾಗಲಕೋಟೆ ಇವರ ಸಹಯೋಗದೊಂದಿಗೆ **ಶ್ರಾವಣ ಮಾಸ ಪರ್ಯಂತ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮನವರ ಪ್ರವಚನ**ವನ್ನು ಚರಂತಿಮಠದಲ್ಲಿ ಜರುಗಿಸಲಾಯಿತು.

- ದಿನಾಂಕ: 12-12-2017ರಂದು ಬಿ.ವಿ.ವಿ. ಸಂಘದ ಮಿನಿ ಸಭಾಭವನದಲ್ಲಿ 2017ನೇ ಶೈಕ್ಷಣಿಕ ವರ್ಷದಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ **"ಪ್ರತಿಭಾ ಪುರಸ್ಕಾರ"** ನೀಡಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಮಹಾಸಭೆಯ ಸಂಸ್ಥಾಪಕರಾದ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ 150ನೇ ಜಯಂತ್ಯೋತ್ಸವವನ್ನು** ಅದ್ದೂರಿಯಾಗಿ ಆಚರಿಸಲಾಯಿತು.

- ಜಮಖಂಡಿ ತಾಲ್ಲೂಕು ಘಟಕದ ವತಿಯಿಂದ ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ **"ಬಸವ ಜಯಂತಿ"** ಮತ್ತು **"ಅಕ್ಕನ ಜಯಂತಿ"**ಗಳನ್ನು ಅರ್ಥಪೂರ್ಣವಾಗಿ ದಿನಾಂಕ: 29-4-2017ರಂದು ಆಚರಿಸಲಾಯಿತು.

- ಮುಧೋಳ ತಾಲ್ಲೂಕು ಘಟಕದ ವತಿಯಿಂದ ಒಳಪಂಗಡಗಳ ಮುಖಂಡರ ಸಭೆ ಕರೆದು ಧಾರ್ಮಿಕವಾಗಿ ಎಲ್ಲರೂ ಏಕತಾಭಾವನೆಯಿಂದ **"ಅಕ್ಕನ ಜಯಂತಿ"**ಯನ್ನು ಮತ್ತು **"ಬಸವ ಜಯಂತಿ"**ಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

- ಬೀಳಗಿ ತಾಲ್ಲೂಕು ಘಟಕದ ವತಿಯಿಂದ **"ಬಸವ ಜಯಂತಿ"** ಹಾಗೂ **"ಅಕ್ಕನ ಜಯಂತಿ"**ಯನ್ನು ದಿನಾಂಕ: 31-03-2018ರಂದು ಶ್ರಾವಣ ಮಾಸದಲ್ಲಿ 11 ದಿನಗಳ ಕಾಲ ಪ್ರವಚನ ಏರ್ಪಡಿಸಲಾಗಿತ್ತು.

- ಬಾದಾಮಿ ತಾಲ್ಲೂಕು ಘಟಕದ ವತಿಯಿಂದ **"ಬಸವ ಜಯಂತಿ"** ಹಾಗೂ **"ಅಕ್ಕನ ಜಯಂತಿ"**ಯನ್ನು ಶ್ರಾವಣಮಾಸದಲ್ಲಿ ಪುರಾಣ ಪ್ರವಚನ ಏರ್ಪಡಿಸಲಾಗಿತ್ತು. ಪ್ರತಿ ತಿಂಗಳ ಮೊದಲ ರವಿವಾರ **ಶಿವಾನುಭವ ಕಾರ್ಯಕ್ರಮ**ವನ್ನು ನಡೆಸಲಾಗುತ್ತಿದೆ.

- ಹುನಗುಂದ ತಾಲ್ಲೂಕು ಘಟಕದ ವತಿಯಿಂದ ಶ್ರಾವಣ ಮಾಸದಲ್ಲಿ ಪ್ರವಚನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. **"ಬಸವ ಜಯಂತಿ"**ಯನ್ನು ಹಾಗೂ **"ಅಕ್ಕನ ಜಯಂತಿ"**ಯನ್ನು ಆಚರಿಸುವುದರ ಜೊತೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

- ಘಟಕದ ವತಿಯಿಂದ **"ಆದಿ ಜಗದ್ಗುರು ರೇಣುಕಾಚಾರ್ಯರ ಜಯಂತಿ"**ಯ ನಿಮಿತ್ಯ ಬಸವೇಶ್ವರ ವೃತ್ತದಿಂದ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ವೀರಶೈವ ಕಲ್ಯಾಣ ಮಂಟಪದಲ್ಲಿ ಹೋಮ ಹಾಗೂ ಪೂಜಾ ವಿಧಿ–ವಿಧಾನಗಳನ್ನು ಹಮ್ಮಿಕೊಳ್ಳಲಾಗಿತ್ತು.

- ಘಟಕದ ವತಿಯಿಂದ ದಿನಾಂಕ: 10–2–2017ರಂದು ಮಹಾಸಭೆ ಹಾಗೂ ಶಿವಯೋಗ ಮಂದಿರ ಪಾಠಶಾಲೆಯನ್ನು ಸ್ಥಾಪಿಸಿದ ಮಹಾಪುರುಷರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಶ್ರೀಗಳವರ ಸಮಾಜಾಭಿವೃದ್ಧಿ ಕಾರ್ಯಗಳನ್ನು ಸ್ಮರಿಸಲಾಯಿತು.

- ಘಟಕದ ವತಿಯಿಂದ ದಿನಾಂಕ: 18–5–2017ರಂದು **ಬಸವ ಜಯಂತಿ**ಯಂದು ಬಸವ ವೃತ್ತದಲ್ಲಿ ಮಾಲಾರ್ಪಣೆ ಮಾಡಲಾಯಿತು. ಸಾಯಂಕಾಲ ಮೆರವಣಿಗೆಯಲ್ಲಿ ಮಹಾಸಭೆಯ ಪದಾಧಿಕಾರಿಗಳು ಮತ್ತು ಸಮಾಜದ ಗಣ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

- ಘಟಕದ ವತಿಯಿಂದ ದಿನಾಂಕ: 2–7–2017ರಂದು **ವಚನ ಪಿತಾಮಹ ಫ.ಗು.ಹಳಕಟ್ಟಿಯವರ ಪುಣ್ಯತಿಥಿ**ಯನ್ನು ವಚನ ಪರಿಷತ್ ಸಹಯೋಗದೊಂದಿಗೆ ಆಚರಿಸಲಾಯಿತು. ಶರಣರ ವಚನಗಳ ಸಂಶೋಧನೆ ಮಾಡಿ ವಚನ ಸಾಹಿತ್ಯ ಉಳಿಸಿ ಬೆಳೆಸಿದ ಮಹಾನ್ ಕಾರ್ಯವನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.

- ಘಟಕದ ವತಿಯಿಂದ ವೀರಶೈವ–ಲಿಂಗಾಯತ ಧಮಕ್ಕೆ ಪ್ರತ್ಯೇಕ ಧರ್ಮದ ಬೇಡಿಕೆಗಾಗಿ ಮಾನ್ಯ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ನಿಯೋಗದಲ್ಲಿ ಸ್ಥಳೀಯ ಮಠಾಧೀಶರುಗಳು, ಮಹಾಸಭೆಯ ಪದಾಧಿಕಾರಿಗಳು ಮತ್ತು ಸಮಾಜದ ಗಣ್ಯವ್ಯಕ್ತಿಗಳು ಹಾಜರಿದ್ದರು.

**ರಾಮನಗರ ಜಿಲ್ಲೆ:–**

- ಚನ್ನಪಟ್ಟಣ ತಾಲ್ಲೂಕ ಘಟಕದ ವತಿಯಿಂದ ದಿನಾಂಕ 1–4–2017ರಂದು **ತ್ರಿವಿಧ ದಾಸೋಹಿ ಡಾ.ಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಜಿಯವರ 110ನೇ ಜನಮದಿನದಂದು** ಶ್ರೀಗಳ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ವಿಜೃಂಭಣೆಯಿಂದ ಆಚರಿಸಲಾಯಿತು. ನಂತರ ಭಕ್ತರಿಗೆ ಮಜ್ಜಿಗೆ, ಪಾನಕ ಮತ್ತು ಕೋಸಂಬರಿ ವಿತರಿಸಲಾಯಿತು.

- ಘಟಕದ ವತಿಯಿಂದ ದಿನಾಂಕ: 15–04–2017ರಂದು ಶ್ರೀ ಬಸವೇಶ್ವರ ಪ್ರಾರ್ಥನಾ ಮಂದಿರದಲ್ಲಿ ಧಾರ್ಮಿಕ ಸಭೆ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ 21 ದಿನಗಳ ಕಾಲ ಯುರೋಪ್ ಪ್ರವಾಸ ಕೈಗೊಂಡಿದ್ದ ಸಮಾಜದ ಶ್ರೀ ಗಂಗಾಧರಯ್ಯನವರನ್ನು ಸ್ಥಳೀಯ ಮಠಾಧೀಶರು ಹಾಗೂ ಸಮಾಜದ ಗಣ್ಯವ್ಯಕ್ತಿಗಳು ಸನ್ಮಾನಿಸಿದರು.

- ಘಟಕದ ವತಿಯಿಂದ ದಿನಾಂಕ: 29–4–2017ರಂದು ನಗರಸಭೆ ಸಭಾಂಗಣದಲ್ಲಿ **ಜಗಜ್ಯೋತಿ ಬಸವೇಶ್ವರ ಜಯಂತಿ**ಯನ್ನು ತಾಲ್ಲೂಕು ಆಡಳಿತದ ಸಹಯೋಗದೊಂದಿಗೆ ಅದ್ದೂರಿಯಾಗಿ ಆಚರಿಸಲಾಯಿತು.

- ಘಟಕದ ವತಿಯಿಂದ ದಿನಾಂಕ: 4–5–2017ರಂದು 7ನೇ ಮನೆಯಂಗಳದಲ್ಲಿ **'ಅರಿವಿನ ಹಬ್ಬ'** ಎಂಬ ವಿನೂತನ ಕಾರ್ಯಕ್ರಮವನ್ನು ಶ್ರೀಮತಿ ಪಿ. ಚೇತನ ರುದ್ರೇಶ ಇವರ ಮನೆಯಲ್ಲಿ ಏರ್ಪಡಿಸಲಾಗಿತ್ತು.

- ತಾಲ್ಲೂಕು ಘಟಕವು ಹೊಯ್ಸಳ ಯುವಕರ ಸಂಘ ಇವರ ಸಹಯೋಗದೊಂದಿಗೆ ದಿನಾಂಕ: 20–6–2017ರಂದು ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ ಮಕ್ಕಳಿಗೆ ಉಚಿತವಾಗಿ ಬ್ಯಾಗ್ ಮತ್ತು ಲೇಖನ ಸಾಮಾಗ್ರಿಗಳನ್ನು ಪೂಜ್ಯ ಶಿವರುದ್ರಸ್ವಾಮೀಜಿಯವರಿಂದ ವಿತರಿಸಲಾಯಿತು.

- ತಾಲ್ಲೂಕು ಘಟಕದಿಂದ ದಿನಾಂಕ: 9–7–2017ರಂದು **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳವರ 150ನೇ ಜಯಂತ್ಯೋತ್ಸವ, ಗುರುವಂದನೆ** ಹಾಗೂ **ಗುರುಪೂರ್ಣಿಮೆ** ಪ್ರಯುಕ್ತ ವಿರಕ್ತಮಠದ ಆವರಣದಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

- ದಿನಾಂಕ: 18–12–2017ರಂದು ನೆಲಮಂಗಲದ ಶ್ರೀ ಪವಾಡ ಬಸವಣ್ಣದೇವರ ಮಠದಲ್ಲಿ **ಶರಣ ಸಂಗಮ ಅರಿವಿನ ಅಂಗಳ ಚಿಂತನಾಗೋಷ್ಠಿಯಲ್ಲಿ** ಚನ್ನಪಟ್ಟಣ ತಾಲ್ಲೂಕು ಘಟಕದ ಪದಾಧಿಕಾರಿಗಳಿಗೆ ಮತ್ತು ಸಮಿತಿ ಸದಸ್ಯರುಗಳಿಗೆ **ಅಭಿನಂದನಾ ಸಮಾರಂಭವನ್ನು** ಏರ್ಪಡಿಸಲಾಗಿತ್ತು.

- ರಾಮನಗರ ಜಿಲ್ಲಾ ಘಟಕದ ವತಿಯಿಂದ ದಿನಾಂಕ: 25–12–2017ರಂದು **'ಪ್ರತಿಭಾ ಪುರಸ್ಕಾರ'**ವನ್ನು ಹಾಗೂ **2018ರ ನೂತನ ಕ್ಯಾಲೆಂಡರ್ ಬಿಡುಗಡೆಯನ್ನು** ಬೇವೂರಿನ ಶ್ರೀ ಮಲ್ಲಿಕಾರ್ಜುನ ಮಠದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಜಿಲ್ಲೆಯ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರಿವಿಸಲಾಯಿತು.

**ಬೀದರ್ ಜಿಲ್ಲೆ :–**

- ಜಿಲ್ಲಾ ಘಟಕದಿಂದ ದಿನಾಂಕ: 29–4–2017ರಂದು **ಬಸವ ಜಯಂತಿ**ಯಂದು ಬಸವೇಶ್ವರರ ಮುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ನಿಮಿತ್ತ ಎರಡು ದಿವಸಗಳ ಕಾಲ ನಗರದ ರಂಗಮಂದಿರದಲ್ಲಿ ವಚನ ಸಂಗೀತ ನೆರವೇರಿಸಲಾಯಿತು.

- ಜಿಲ್ಲಾ ಘಟಕದಿಂದ ದಿನಾಂಕ: 2–10–2017ರಂದು **ಗಾಂಧಿಜಯಂತಿ**ಯನ್ನು ಕಮಠಾಣೆ ಕಾಲೇಜಿನಲ್ಲಿ ಆಚರಿಸಲಾಯಿತು. ಮಕ್ಕಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

- ಜಿಲ್ಲಾ ಘಟಕದಿಂದ ದಿನಾಂಕ: 3–2–2018ರಂದು **ಪ್ರತಿಭಾ ಪುರಸ್ಕಾರ**ವನ್ನು ಏರ್ಪಡಿಸಿ, ಶೇಕಡ 90 ಹಾಗೂ 90ಕ್ಕಿಂತ ಹೆಚ್ಚು ಅಂಕಗಳಿಸಿದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳನ್ನು ಗೌರವಿಸಿ, ಮಹಾಸಭೆಯಿಂದ ಕೊಟ್ಟ ಪ್ರಶಂಸಾಪತ್ರ, ಚೆಕ್ ಮತ್ತು ಕರಡಿಗೆಗಳನ್ನು ವಿತರಿಸಲಾಯಿತು.

- ದಿನಾಂಕ: 9–2–2018 ರಿಂದ 11–2–2018ರವರೆಗೆ 3 ದಿವಸ **ಬಸವ ಉತ್ಸವ** ಕಾರ್ಯಕ್ರಮವನ್ನು ಬಸವ ಕಲ್ಯಾಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಘಟಕದಿಂದ ಭಾಗವಹಿಸಲಾಗಿತ್ತು.

- ದಿನಾಂಕ: 7–3–2018ರಂದು ಬೀದರ್ ಜಿಲ್ಲೆಯಲ್ಲಿ **ವೀರಶೈವ–ಲಿಂಗಾಯತ ಭವನ** ನಿರ್ಮಿಸಲು ಸರ್ಕಾರಿ ನಿವೇಶನ ನೀಡಬೇಕೆಂದು ಕೋರಿ ನಿಯೋಗದೊಂದಿಗೆ ಮಾನ್ಯ ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿ ಮನವಿ ಸಲ್ಲಿಸಲಾಗಿದೆ.

- ಜಿಲ್ಲಾ ಘಟಕದಿಂದ ಜಿಲ್ಲೆಯಲ್ಲಿ ಹಮ್ಮಿಕೊಳ್ಳುವ ಸಭೆ–ಸಮಾರಂಭಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾಗಿದೆ.

**ಹಾಸನ ಜಿಲ್ಲೆ :–**

- ಬೇಲೂರು ತಾಲ್ಲೂಕು ಘಟಕದಿಂದ ದಿನಾಂಕ: 15–5–2017ರಂದು **ಬಸವ ಜಯಂತಿ** ಮತ್ತು **ಡಾ. ಶ್ರೀಶ್ರೀಶ್ರೀ ಶಿವಕುಮಾರ ಮಹಾಸ್ವಾಮಿಗಳ ಗುರುವಂದನಾ ಕಾರ್ಯಕ್ರಮ**ವನ್ನು ಅದ್ದೂರಿಯಾಗಿ ಆಚರಿಸಲಾಯಿತು.

- ತಾಲ್ಲೂಕು ಘಟಕದಿಂದ ಜಿಲ್ಲೆಯ ಮಠಾಧೀಶರು ಹಾಗೂ ಸಮಾಜಬಾಂಧವರನ್ನು ಬೇಲೂರು ಪಟ್ಟಣದಲ್ಲಿ ಸೇರಿಸಿ ಬೃಹತ್ ಸಮಾವೇಶವನ್ನು ನೆರವೇರಿಸಲಾಯಿತು.

- ತಾಲ್ಲೂಕು ಘಟಕದಿಂದ ಕಾಲಕಾಲಕ್ಕೆ ಸಭೆಗಳನ್ನು ಕರೆದು ಮಹಾಸಭೆಯು ನೀಡುವ ಸೂಚನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ.

**ಬೆಂಗಳೂರು ನಗರ ಜಿಲ್ಲೆ :–**

- ಬೆಂಗಳೂರು ನಗರ ಜಿಲ್ಲಾ ಘಟಕದ ವತಿಯಿಂದ ಶರಣ ಸೇವಾ ಸಮಾಜ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು ಇಲ್ಲಿ 2017ನೇ ಸಾಲಿನ **"ಪ್ರತಿಭಾ ಪುರಸ್ಕಾರ"**ವನ್ನು ಏರ್ಪಡಿಸಲಾಗಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಹಾಸಭೆಯಿಂದ ಕೊಟ್ಟ ಪ್ರಶಂಸಾಪತ್ರ, ಚೆಕ್ ಮತ್ತು ಕರಡಿಗೆಗಳನ್ನು ವಿತರಿಸಲಾಯಿತು.

- ಬೆಂಗಳೂರು ದಕ್ಷಿಣ ತಾಲ್ಲೂಕು ಘಟಕದಿಂದ ಪ್ರತಿ ಮೂರು ತಿಂಗಳಿಗೊಮ್ಮೆ **"ತ್ರೈಮಾಸಿಕ ಉಪನ್ಯಾಸ ಮಾಲಿಕೆ"** ಕಾರ್ಯಕ್ರಮವನ್ನು ಆಯೋಜಿಸಿ, ಶ್ರೇಷ್ಠ ಭಾಷಣಕಾರರನ್ನು ಆಹ್ವಾನಿಸಲಾಗುವುದು.

- ಬೆಂಗಳೂರು ದಕ್ಷಿಣ ತಾಲ್ಲೂಕು ಘಟಕದಿಂದ ವೀರಶೈವ–ಲಿಂಗಾಯತ ಸಮನ್ವಯ ಕಾರ್ಯಕ್ರಮವನ್ನು ಆಯೋಜಿಸಿ **ಪೂಜ್ಯ ಹಾನಗಲ್ ಕುಮಾರಸ್ವಾಮಿಗಳು** ಮತ್ತು **ವಚನ ಪಿತಾಮಹ ಫ.ಗು. ಹಳಕಟ್ಟಿಯವರ** ಸಾಮಾಜಿಕ, ಧಾರ್ಮಿಕ ಸೇವೆ ಮತ್ತು ಕೊಡುಗೆಗಳ ಬಗ್ಗೆ ಸ್ಮರಿಸಲಾಗಿದೆ.

- ಬೆಂಗಳೂರು ದಕ್ಷಿಣ ತಾಲ್ಲೂಕು ಘಟಕದಿಂದ ವೀರಶೈವ–ಲಿಂಗಾಯತ ಸಮಾಜದ ಬಡ ವಿದ್ಯಾರ್ಥಿಗಳಿಗೆ **ವಿದ್ಯಾರ್ಥಿವೇತನ** ನೀಡಿ ಪ್ರೋತ್ಸಾಹಿಸಲಾಗಿದೆ.

- ಪ್ರತಿ ಸಭೆಗಳಲ್ಲಿ ಮಹಾಸಭಾ ಗೀತೆಯನ್ನು ಹಾಡುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಗುತ್ತಿದೆ. ಸಭೆಯಲ್ಲಿ ಸದಸ್ಯತ್ವ ಹೆಚ್ಚಿಸಲು ಪ್ರೇರೇಪಿಸಲಾಗುತ್ತಿದೆ. ಜಿಲ್ಲಾ ಘಟಕ ಹಾಗೂ ಸಂಘ–ಸಂಸ್ಥೆಗಳು ಹಮ್ಮಿಕೊಳ್ಳುವ **ಪ್ರತಿಭಾ ಪುರಸ್ಕಾರ** ಹಾಗೂ ಇನ್ನಿತರೇ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ದಕ್ಷಿಣ ತಾಲ್ಲೂಕು ಘಟಕದಿಂದ ಪಾಲ್ಗೊಳ್ಳಲಾಗುತ್ತಿದೆ.

**ಚಿಕ್ಕಬಳ್ಳಾಪುರ ಜಿಲ್ಲೆ :–**

- ಗೌರಿಬಿದನೂರು ತಾಲ್ಲೂಕು ಘಟಕದಿಂದ ಮಹಾತ್ಮಗಾಂಧಿ ವೃತ್ತದಲ್ಲಿ **ಶತಾಯುಷಿ ಡಾ. ಶ್ರೀಶ್ರೀ ಶಿವಕುಮಾರಸ್ವಾಮಿಗಳ** ಜನುಮದಿನವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸಲಾಯಿತು.

- ತಾಲ್ಲೂಕು ಆಡಳಿತದೊಂದಿಗೆ ಗೌರಿಬಿದನೂರು ತಾಲ್ಲೂಕು ಘಟಕವು ಡಾ. ಹೆಚ್.ಎನ್.ಕಲಾಭವನದಲ್ಲಿ **"ವಿಶ್ವಗುರು ಬಸವಣ್ಣನವರ"** ಜಯಂತಿಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣು, ಹಂಪಲು ವಿತರಿಸಲಾಯಿತು.

**ಚಿತ್ರದುರ್ಗ ಜಿಲ್ಲೆ :–**

- ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಮಹಿಳಾ ವಿಭಾಗದಿಂದ **"ವಿಶ್ವಗುರು ಬಸವಣ್ಣನವರ"** ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

- ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 29–4–2017ರಂದು **"ಜಗಜ್ಯೋತಿ ಬಸವೇಶ್ವರರ"** ಜಯಂತಿಯನ್ನು ವೀರಗಾಸೆ, ಕೋಲಾಟ, ವಚನ ಗಾಯನ, ಶರಣರ ನುಡಿಗಳ ಉದ್ಘೋಷಗಳಿಂದ ಕೂಡಿ ಬೆಳ್ಳಿಯ ಅಶ್ವಗಳ ಸಾರೋಟಿನಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು.

- ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 10–5–2017ರಂದು ಹಿರಿಯೂರು ತಾಲ್ಲೂಕು ಕಛೇರಿಯವರ ಸಹಯೋಗದೊಂದಿಗೆ ತಾಲ್ಲೂಕು ದಂಡಾಧಿಕಾರಿಗಳೊಡನೆ **"ಹೇಮರೆಡ್ಡಿ ಮಲ್ಲಮ"** ಜಯಂತಿಯನ್ನು ಆಚರಿಸಲಾಯಿತು. ಅಂದು ಮೇಟಿಕುರ್ಕೆಯಲ್ಲಿ ನಡೆದ ಹೇಮರೆಡ್ಡಿ ಜಯಂತಿ ಕಾರ್ಯಕ್ರಮದ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಾಗಿತ್ತು.

- ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 13–5–2017ರಂದು ಹಿರಿಯೂರಿನ ಗಿರೀಶ ಮಹಿಳಾ ವಿದ್ಯಾಸಂಸ್ಥೆಯ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ **ಮಹಿಳಾ ಆರೋಗ್ಯ, ಮಹಿಳಾ ಲೈಂಗಿಕ ಆರೋಗ್ಯದ** ಬಗ್ಗೆ ಉಚಿತ ಸಲಹಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

- ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 21–7–2017ರಂದು **ಹೆಣ್ಣು ಭ್ರೂಣ ಹತ್ಯೆ ಖಂಡಿಸಿ** ವಿವಿಧ ಘೋಷಣೆಗಳೊಂದಿಗೆ ಹಿರಿಯೂರಿನ ಎಲ್ಲಾ ಮಹಿಳಾ ಸಂಘಟನೆಗಳೊಡಗೂಡಿ ಬೃಹತ್ ಮೆರವಣಿಗೆಯನ್ನು ಪ್ರಮುಖ ಬೀದಿಗಳಲ್ಲಿ ಪರಿಣಾಮಕಾರಿಯಾಗಿ ನೆರವೇರಿಸಲಾಯಿತು.

- ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 6–7–2017ರಂದು ರೋಟರಿಕ್ಲಬ್, ಇನ್ನರ್‌ವೀಲ್ ಕ್ಲಬ್, ವಾಸವಿ ಕ್ಲಬ್‌ಗಳ ಸಂಯುಕ್ತ ಆಶ್ರಯದಲ್ಲಿ ಮಹಿಳೆಯರಿಗಾಗಿ ನೆನಪಿನ ಸ್ಪರ್ಧೆಯನ್ನು 3 ಹಂತಗಳಲ್ಲಿ ಏರ್ಪಡಿಸಲಾಗಿತ್ತು. ರಾಷ್ಟ್ರೀಯ ಅಕಾಡೆಮಿ ಶಾಲಾ ಆವರಣದಲ್ಲಿ ನಡೆದ ಈ ಸ್ಪರ್ಧೆಯ ನಂತರ ವಿಜೇತರಿಗೆ ನಗದು ಬಹುಮಾನ ವಿತರಿಸಲಾಯಿತು.

- ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 11–9–2017ರಂದು **ದಂತ ತಪಾಸಣೆ** ಮತ್ತು **ಉಚಿತ ಚಿಕಿತ್ಸಾ ಶಿಬಿರವನ್ನು** ಐ.ಟಿ.ಐ. ಕಾಲೇಜಿನಲ್ಲಿ ಡಾ. ಸುಜಲ್‌ರವರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿತ್ತು. 400 ಜನ ವಿದ್ಯಾರ್ಥಿಗಳು ಈ ಶಿಬಿರದ ಪ್ರಯೋಜನ ಪಡೆದುಕೊಂಡರು.

- ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 23–10–2017ರಂದು **ಕಿತ್ತೂರು ರಾಣಿ ಚೆನ್ನಮ್ಮ ಜಯಂತಿಯನ್ನು** ತಾಲ್ಲೂಕು ದಂಡಾಧಿಕಾರಿಗಳ ಕಛೇರಿಯಲ್ಲಿ ಅವರ ಸಹಯೋಗದೊಂದಿಗೆ ತಹಶೀಲ್ದಾರ ಶ್ರೀ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

- ಹಿರಿಯೂರು ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 18–1–2018ರಂದು ಮಹಿಳಾ ದೌರ್ಜನ್ಯ ಖಂಡಿಸಿ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಂಡು ವಿಜ್ಞಾಪನ ಪತ್ರವನ್ನು ತಾಲ್ಲೂಕು ದಂಡಾಧಿಕಾರಿಗಳಿಗೆ ಸಲ್ಲಿಸಲಾಯಿತು.

- ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 16–1–2018ರಂದು ಸಂಕ್ರಾಂತಿ ಹಬ್ಬದ ಅಂಗವಾಗಿ **ಸಂಕ್ರಾಂತಿ ಸಂಭ್ರಮ ಉತ್ಸವವನ್ನು** ಬಸವಣ್ಣನ ಗುಡಿಯಲ್ಲಿ ಹಮ್ಮಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳಿಂದ ಹಬ್ಬವನ್ನು ಸಂಭ್ರಮಿಸಲಾಯಿತು.

- ತಾಲ್ಲೂಕು ಮಹಿಳಾ ವಿಭಾಗದಿಂದ ದಿನಾಂಕ: 27–1–2018ರಂದು ಹಿರಿಯೂರು ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಬಬ್ಬೂರು ಫಾರಂನ ಕೃಷಿ ಇಲಾಖೆಯ ಸಹಯೋಗದಲ್ಲಿ ಅಣಬೆ ಬೇಸಾಯ ಪದ್ಧತಿಯ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

**ಬೆಳಗಾವಿ ಜಿಲ್ಲೆ :–**

- **ಬೆಳಗಾವಿ ವೀರಶೈವ ವಾಣಿ :** ಶರಣ ಸಾಹಿತ್ಯಕ್ಕೆ ಮೀಸಲಾದ ಈ **"ವೀರಶೈವ ವಾಣಿ"** ಪಾಕ್ಷಿಕ ಪತ್ರಿಕೆಯನ್ನು ನಿಯಮಿತವಾಗಿ ಓದುಗರಿಗೆ ತಲುಪಿಸುತ್ತಿರುವ ತೃಪ್ತಿ ಬೆಳಗಾವಿ ಜಿಲ್ಲಾ ಘಟಕಕ್ಕಿದೆ. ಮೌಲಿಕ ಲೇಖನಗಳನ್ನು ಪಡೆಯಲು ಎಷ್ಟೆ ಅಡೆ–ತಡೆ ತೊಂದರೆಯಾದರೂ, ಸಂಪಾದಕರ ಹಾಗೂ ಪ್ರಕಾಶಕರ ಸತತ ಪ್ರಯತ್ನದಿಂದ ಹೆಸರಾಂತ ಸಾಹಿತಿಗಳಿಂದ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಸಂಪಾದಿಸಿಕೊಂಡು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿದೆ.

  ಪತ್ರಿಕೆಯು ಸಮಾಜದ ಸಮಗ್ರ ಅಭಿವೃದ್ಧಿಗೆ ಪೂರಕವಾಗುವ ರೀತಿಯಲ್ಲಿ ಬರಬೇಕೆಂಬ ಅಭಿಪ್ರಾಯದ ಮೇರೆಗೆ ವಿಷಯ ಸಂಗ್ರಹಣೆ ಮಾಡಲು ಸಮಯದ ಅವಶ್ಯಕತೆ ಇರುವುದರಿಂದ **'ಪಾಕ್ಷಿಕ'** ಬದಲಿಗೆ **'ಮಾಸಿಕ'** ಪತ್ರಿಕೆಯಾಗಿ ಬದಲಾಯಿಸಲು ಜಿಲ್ಲಾ ಘಟಕದ ಸಭೆಯಲ್ಲಿ ನಿರ್ಣಯ ಕೈಕೊಂಡು ಈಗಿರುವ 4 ಪುಟಗಳ ವಾಣಿಯನ್ನು ಹೆಚ್ಚಿನ ಪುಟಗಳ ವಾಣಿಗಳಾಗಿ ಮಾರ್ಪಡಿಸಿ ವೈವಿಧ್ಯಮಯವಾಗಿ, ಸಾಹಿತ್ಯಕವಾಗಿ ಸಮಾಜದ ಅಭಿವೃದ್ಧಿಗೆ ಪೂರಕವಾಗುವಂತೆ ಮಾಸಿಕ ಪತ್ರಿಕೆಯಾಗಿ ಪ್ರಕಟಿಸಲಾಗುತ್ತಿದೆ.

- **ಬಸವ ಜಯಂತಿಯ ಅರ್ಥಪೂರ್ಣ ಹಾಗೂ ವೈಭವಯುತ ಆಚರಣೆ :** ಪ್ರತಿಸಲದಂತೆ ಈ ಸಲವೂ **"ಬಸವ ಜಯಂತಿ"**ಯನ್ನು ದಿ. 27–04–2017 ರಿಂದ 29–04–2017 ರ ವರೆಗೆ ಮೂರು ದಿನಗಳ ಪರ್ಯಂತ ಮಹಿಳಾ ಗೋಷ್ಠಿ, ಜಿಲ್ಲಾ ಕಾರಾಗೃಹದಲ್ಲಿ ಕೈದಿಗಳ ಅಂತರಂಗ, ಬಹಿರಂಗ ಶುದ್ಧಿ ಕಾರ್ಯಕ್ರಮ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕೊನೆಯ ದಿನ ಬಸವ ಭಾವ ಪೂಜೆ ಮತ್ತು ಭವ್ಯ ಮೆರವಣಿಗೆ ಅತ್ಯಂತ ಉತ್ಸಾಹ, ಹುರುಪು, ಹುಮ್ಮಸ್ಸಿನಿಂದ ವೈಭವ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

- **ವೀರಶೈವ–ಲಿಂಗಾಯತ ವಧು–ವರರ ಅನ್ವೇಷಣ ಕೇಂದ್ರ** : ವೀರಶೈವ ಮಹಾಸಭಾ, ಜಿಲ್ಲಾ ಘಟಕ ಹಾಗೂ ಕೆ.ಎಲ್.ಇ ಸಂಸ್ಥೆಯು ಸಮಾಜಕ್ಕೆ ಬಹುಪಯೋಗ್ಯವಾದ **ವಧು–ವರ ಅನ್ವೇಷಣಾ ಕೇಂದ್ರ**ವೆಂಬ ಸಂಸ್ಥೆಯನ್ನು 1992 ರಲ್ಲಿ ಪ್ರಾರಂಭಿಸಿದ್ದು, ಸಮಾಜಕ್ಕೆ ಇದರಿಂದ ಬಹಳ ದೊಡ್ಡ ಸೇವೆ ಸಲ್ಲಿಸುತ್ತಿದೆ. ಇದರಿಂದ ಪಾಲಕರಿಗೆ ಅವರ ಅವಶ್ಯಕತೆ ಹಾಗೂ ಇಚ್ಛೆಯಂತೆ ವಧು ಅಥವಾ ವರ ಪಡೆಯುವಲ್ಲಿ ಈ ಸಂಸ್ಥೆಯು ಅನುಕೂಲ ಮಾಡಿ ಕೊಟ್ಟಿರುತ್ತದೆ. ಇಲ್ಲಿಯ ವರೆಗೆ ಈ ಸಂಸ್ಥೆ 56 ವಧು–ವರ ಸಮ್ಮೇಳನಗಳನ್ನು ಏರ್ಪಡಿಸಿ 1000/– ಕ್ಕೂ ಮೇಲ್ಪಟು ಲಗ್ನಗಳು ನೆರವೇರಲು ಅನುಕೂಲತೆ ಮಾಡಿಕೊಟ್ಟಿರುತ್ತದೆ.

- **ಪ್ರತಿ ತಿಂಗಳ ಅಮಾವಾಸ್ಯೆಯ ಅನುಭಾವಗೋಷ್ಠಿ** : ಪ್ರತಿ ಅಮಾವಾಸ್ಯೆಯ ದಿನ ಜಿಲ್ಲಾ ಘಟಕವು **"ಅಮಾವಾಸ್ಯೆಯ ಅನುಭಾವ ಗೋಷ್ಠಿ"**ಯನ್ನು ಏರ್ಪಡಿಸುತ್ತಿರುವುದು ವಿಶೇಷವಾಗಿದೆ. ಅನುಭಾವ ಗೋಷ್ಠಿಗಳಲ್ಲಿ ಪ್ರಾಸಂಗಿಕವಾಗಿ ಬರುವ ಶರಣ–ಶರಣೆಯರ ಜಯಂತಿ, ಸ್ಮರಣೋತ್ಸವಗಳ ಆಚರಣೆ ಹಾಗೂ ಶರಣ ಶರಣೆಯರ ಬದುಕು ಬೋಧನೆಗಳ ವಿವಿಧ ಆಯಾಮಗಳ ಬಗ್ಗೆ ಪರಿಣಿತರಿಂದ ಉಪನ್ಯಾಸ ನಂತರ ಸಭಿಕರಿಂದ ಮುಕ್ತ ಚರ್ಚೆ ಏರ್ಪಡಿಸಲಾಗುತ್ತದೆ. ಈ ಅನುಭಾವ ಗೋಷ್ಠಿಗಳಲ್ಲಿ ವೀರಶೈವ ಲಿಂಗಾಯತ ಧರ್ಮಾಚರಣೆ, ಬಸವ ತತ್ವಗಳು, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರೋಗ್ಯ, ಲಿಂಗ ಸಮಾನತೆ, ವಿಜ್ಞಾನ, ಆರ್ಥಿಕ, ಕಾಯಕ, ಜಾತ್ಯಾತೀತ ಸಮಾಜದ ಪರಿಕಲ್ಪನೆ ಕುರಿತಂತೆ ಹನ್ನೆರಡನೇ ಶತಮಾನದ ಶರಣರ ಆಚಾರ–ವಿಚಾರ ಸರಣಿ, ಸಂದೇಶಗಳ ಕುರಿತು ಉಪನ್ಯಾಸಗಳು ಜರುಗುತ್ತಲಿವೆ.

- **ಪ್ರತಿಭಾ ಪುರಸ್ಕಾರ** : ದಿನಾಂಕ : 21–01–2018 ರಂದು ಅಖಿಲ ಭಾರತ ವೀರಶೈವ ಮಹಾಸಭೆ, ಬೆಂಗಳೂರು ಹಾಗೂ ಜಿಲ್ಲಾ ಘಟಕ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ **ಪ್ರತಿಭಾ ಪುರಸ್ಕಾರ** ಸಭೆ ಏರ್ಪಡಿಸಲಾಗಿತ್ತು. ಮಹಾಸಭೆಯ ಹಿರಿಯ ಉಪಾಧ್ಯಕ್ಷರು ಹಾಗೂ ರಾಜಾಧ್ಯಕ್ಷರಾಗಿರುವ ಶ್ರೀ ಎನ್. ತಿಪ್ಪಣ್ಣವರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮಹಾಸಭೆಯ ಉಪಾಧಕ್ಷರುಗಳಾದ ಶ್ರೀ ಮಲ್ಹಾರಿಗೌಡ ಪಾಟೀಲ, ಮಾಜಿ ನೀರಾವರಿ ಮಂತ್ರಿಗಳು, ಶ್ರೀ ಬಿ.ಎಸ್. ಸಚ್ಚಿದಾನಂದ ಮೂರ್ತಿ, ಕಾರ್ಯದರ್ಶಿಗಳಾದ ಶ್ರೀ ಹೆಚ್. ಎಂ. ರೇಣುಕಪ್ರಸನ್ನ, ಬೆಂಗಳೂರು ಇವರೆಲ್ಲರೂ ಅತಿಥಿಗಳಾಗಿ ಆಗಮಿಸಿದ್ದರು. ಸಮಾರಂಭದಲ್ಲಿ ಒಟ್ಟು 242 ವಿಧ್ಯಾರ್ಥಿ ಹಾಗೂ ವಿಧ್ಯಾರ್ಥಿನಿಯರಿಗೆ ಅವರ ಪರೀಕ್ಷೆಗಳಲ್ಲಿ ಗರಿಷ್ಠ ಅಂಕ ಪಡೆದುದ್ದಕ್ಕಾಗಿ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

**ಕೃತಜ್ಞತೆಗಳು:–**

ಮಹಾಸಭೆಯ ಪ್ರಯತ್ನಗಳನ್ನು ಹಾಗೂ ಕಾರ್ಯಕ್ರಮಗಳನ್ನು ಸದಾ ಬೆಂಬಲಿಸಿ, ಆಶೀರ್ವದಿಸಿ ಮಾರ್ಗದರ್ಶನ ನೀಡುತ್ತಾ ಬಂದಿರುವ ಎಲ್ಲಾ ಪೂಜ್ಯ ಪೀಠಾಧೀಶರುಗಳಿಗೂ ಹಾಗೂ ಮಠಾಧೀಶರುಗಳಿಗೂ ಮಹಾಸಭೆಯು ಅತ್ಯಂತ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತದೆ.

ಇದಲ್ಲದೇ, ಸದಾ ಸಹಾಯ, ಸಹಕಾರ, ಸಲಹೆಗಳನ್ನು ನೀಡುತ್ತಾ ಬಂದಿರುವ ಸಮಾಜದ ಎಲ್ಲಾ ಜನಪ್ರತಿನಿಧಿಗಳು, ಶಾಸಕರು, ಸಚಿವರು, ಸಂಸದರು, ಪತ್ರಕರ್ತರು, ಬುದ್ಧಿಜೀವಿಗಳು, ಸಾಹಿತಿಗಳು, ಸಂಶೋಧಕರು, ಸಂಘ–ಸಂಸ್ಥೆಗಳು, ಸರ್ಕಾರಿ ಅಧಿಕಾರಿಗಳು, ರಾಜ್ಯ/ಜಿಲ್ಲಾ/ತಾಲ್ಲೂಕು/ ಇತರೇ ಘಟಕಗಳ ಅಧ್ಯಕ್ಷರು ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು

ಹಾಗೂ ಎಲ್ಲಾ ಸದಸ್ಯರು ಮತ್ತು ಮಹಿಳಾ ಹಾಗೂ ಯುವ ವಿಭಾಗಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು, ಮಹಾಸಭೆಯ ಎಲ್ಲಾ ಸದಸ್ಯರುಗಳು ಮತ್ತು ಕೃಷಿ ಸಮಿತಿ ಹಾಗೂ ಕೃಷಿ ಕಾಯಕ ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರುಗಳಿಗೂ ಗೌರವಪೂರ್ವಕವಾಗಿ ವಂದಿಸುತ್ತದೆ. ವಿಶೇಷವಾಗಿ ಪ್ರಧಾನ ಕಛೇರಿಯ ಸಿಬ್ಬಂದಿಯವರು ಸಮಯಾನುಸಾರ ನಿಷ್ಠೆ ಹಾಗೂ ಅತ್ಯಂತ ಪ್ರಾಮಾಣಿಕತೆಯಿಂದ ನಿರ್ವಹಿಸುವ ಅವರ ಕಾರ್ಯದಕ್ಷತೆಯನ್ನು ಅಭಿನಂದಿಸುತ್ತದೆ.

ಮಹಾಸಭೆಯ ಲೆಕ್ಕಪತ್ರಗಳನ್ನು ಪ್ರತಿವರ್ಷವೂ ಪರಿಶೀಲಿಸಿ ನಿಗದಿತ ವೇಳೆಯಲ್ಲಿ ವರದಿಯನ್ನು ಒದಗಿಸುವ ಲೆಕ್ಕಪರಿಶೋಧಕರಾದ **ಮೆ॥ ಬಿ.ಆರ್.ವಿ.ಗೌಡ & ಕಂಪನಿ, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು** ಇವರ ಸೇವೆಯನ್ನು ಹಾಗೂ ಆಹ್ವಾನ ಪತ್ರಿಕೆ, ಕೃಷಿ ಕಾಯಕ ಪತ್ರಿಕೆ, ವಾರ್ಷಿಕ ವರದಿ ಇನ್ನು ಇತ್ಯಾದಿ ಪುಸ್ತಕಗಳನ್ನು ಮುದ್ರಿಸಿಕೊಡುವ **ಮೆ॥ ಸ್ನೇಹಾ ಪ್ರಿಂಟರ್ಸ್, ಬೆಂಗಳೂರು** ಇವರ ಸೇವೆಯನ್ನು ಮಹಾಸಭೆ ಸ್ಮರಿಸುತ್ತದೆ.

**(ಈಶ್ವರ ಖಂಡ್ರೆ, ಶಾಸಕರು)**
ಮಹಾಪ್ರಧಾನ ಕಾರ್ಯದರ್ಶಿ

**(ಡಾ. ಶಾಮನೂರು ಶಿವಶಂಕರಪ್ಪ, ಶಾಸಕರು)**
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 04–12–2018